ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ–ಜೂನ್ 2018 ಮಾಸ ಪತ್ರಿಕೆ

ಸಂಪುಟ/Volume : 40
ಸಂಚಿಕೆ/Issue : 8–9
ಪುಟ/Pages : 16
ಬೆಲೆ/Price : ₹ 10/–

Akhila Karnataka Shikshaka Samachara | May-June 2018 | Monthly




4 ಮಿತಿಯಾಚೆಗಿನ ಮಿಂಚು ಬದುಕಿನ ಸವಾಲು

7 ಅಪೂರ್ವ ಸಹೋದರಿಯರು

8 ಶಿಕ್ಷಕರೇ ನಿಮ್ಮ ಪ್ರತಿನಿಧಿ ಹೇಗಿರಬೇಕು?

9 ವಿಶ್ವ ಪರಿಸರ ದಿನ

A Journal of Karnataka State Secondary Teachers' Association

# ಸಂಪಾದಕೀಯ

ಷಷ್ಟಿ ವೈಶಾಖ, ಕೃಷ್ಣ ಪಕ್ಷ 1805 ಸ್ವಭಾನು ಶಕ ಸಂವತ (28 ಮೇ 1883) ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ದಿಟ್ಟ ಸವಾಲಾಗಿ ನಿಂತು ಬೆಳಗಿದ, ತಮ್ಮ ಹೆಸರು ಕೇಳಿದರೆ, ಬ್ರಿಟಿಷರ ಎದೆ ನಡುಗುವಂತೆ ಮಾಡಿದ ಮತ್ತು ಆ ಕಾರಣಕ್ಕಾಗಿಯೇ ವಿಶ್ವದ ಮೊದಲ ಬಾರಿ 50 ವರ್ಷಗಳ ಘೋರ ಕರಿನೀರಿನ ಶಿಕ್ಷೆಗೆ ಒಳಗಾದ ಮಹಾನ್ ಕ್ರಾಂತಿಕಾರಿ, 11 ಬಾರಿ ಕಠಿಣ ಸೆರೆವಾಸಕ್ಕೆ ಗುರಿಯಾದ ಅದ್ವಿತೀಯ ಸೇನಾನಿ, ಹಿಂದುತ್ವ ಪರಿಕಲ್ಪನೆಯ ಹರಿಕಾರ, "ಸಂಪೂರ್ಣ ಸ್ವಾತಂತ್ರ್ಯವೇ ಭಾರತದ ಧ್ಯೇಯ" ಎಂಬ ಘೋಷವಾಕ್ಯವನ್ನು ಮೊದಲ ಬಾರಿ ಘೋಷಿಸಿದ ವೀರ, ಮಹಾನ್ ವಾಗ್ಮಿ, ಲೇಖಕ, ಇತಿಹಾಸಕಾರ, ಕವಿ, ತತ್ವಶಾಸ್ತ್ರಜ್ಞ, ಸಮಾಜಸೇವಕ, ಭಾರತಮಾತೆಯ ಹೆಮ್ಮೆಯ ಸುಪುತ್ರ ವೀರ ವಿನಾಯಕ ದಾಮೋದರ ಸಾವರ್ಕರ್ ಜನಿಸಿದ ಸುದಿನ.

ಅವರ ಪರಿಚಯದ ಪರಿವಿಡಿಯೇ ರೋಮಾಂಚನಕಾರಿ. ತಾಯಿ ಯಶೋಧ ಸಾವರ್ಕರ್ ಮತ್ತು ತಂದೆ ದಾಮೋದರ್ ಸಾವರ್ಕರ್ ಇಂತಹ ಸುಪುತ್ರನನ್ನು ಪಡೆದಿದ್ದರಿಂದಲೇ ಅಜರಾಮರರಾದರು. ಕ್ರಾಂತಿ ಎಸಗಿ ರಾಜಸತ್ತೆಯನ್ನು ಉರುಳಿಸುವ ಸಂಚು ನಡೆಸಿದ್ದಕ್ಕಾಗಿ ಮತ್ತು ಆಂಗ್ಲ ಅಧಿಕಾರಿಗಳ ಕೊಲೆಗೆ ಪ್ರೇರೇಪಣೆ ನೀಡಿದ್ದಕ್ಕಾಗಿ ಎಂದು ಪ್ರತ್ಯೇಕವಾಗಿ ಎರಡು ಕರಿನೀರಿನ ಜೀವಾವಧಿ ಶಿಕ್ಷೆಗಳು ವಿಧಿಸಲ್ಪಟ್ಟವು. ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ತಮ್ಮ ಹೃದಯದ ಅಂತರಾಳದಲ್ಲಿ ಹೊತ್ತಿಸಿಕೊಂಡ ಸಾವರ್ಕರ್‌ರವರಿಗೆ ಆಂಗ್ಲರ ಯಾವ ಶಿಕ್ಷೆಗಳು ಏನೂ ಪರಿಣಾಮ ಮಾಡದಾದವು. ಅವರ ಶರೀರವನ್ನು ಸಂಕೋಲೆಗಳು ಬಂಧಿಸಿದ್ದರೂ, ಅವರ ಬುದ್ಧಿ, ಕಲ್ಪನಾಶಕ್ತಿಗಳು ರೆಕ್ಕೆ ಬಿಚ್ಚಿ ಹಾರಾಡುತ್ತಿದ್ದವು. ಕಾರಾಗೃಹದಲ್ಲಿಯೇ ಕಾವ್ಯರಚನೆ ಮಾಡಿ ಮೊಳೆಗಳಿಂದ ಕಾರಾಗೃಹದ ಗೋಡೆಗಳ ಮೇಲೆ ಬರೆಯುತ್ತಿದ್ದರು. 'ಕಮಲಾ', 'ಗೋಮಂತಕ', 'ಮಹಾಸಾಗರ' ಎಂಬ ಅನೇಕ ಕಾವ್ಯಗಳನ್ನು ಅಂಡಮಾನಿನ ಕಾರಾಗೃಹದಲ್ಲಿಯೇ ಸೃಷ್ಟಿಸಿದರು. "ಭಾರತೀಯ ಇತಿಹಾಸದಲ್ಲಿಯ ಆರು ಸುವರ್ಣ ಪುಟಗಳು" ಎಂಬ ಬೃಹತ್ ಐತಿಹಾಸಿಕ ಗ್ರಂಥವನ್ನು ರಚಿಸಿದರು. ಗಾಂಧಿ ಹತ್ಯೆಯಲ್ಲಿ ಒಂದೊಮ್ಮೆ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿದ್ದ ಸಾವರ್ಕರ್‌ರ ಪಾತ್ರವೂ ಇದೆ ಎನ್ನುವ ಅಪಾದನೆಯಿಂದ ಸಾಕಷ್ಟು ಮನನೊಂದ ವೀರ ತಮ್ಮ 83ನೇ ವಯಸ್ಸಿನಲ್ಲಿ 1966 ರ ಫೆಬ್ರವರಿ 1 ರಂದು ಅಮರಣಾಂತ ಉಪವಾಸ ಕೈಗೊಂಡು ಫೆ. 26 ನೇ ಬೆಳಗ್ಗ 10.30 ಕ್ಕೆ ಅಮರರಾಗಿದ್ದು ಇತಿಹಾಸ.

ತದಿಗೆ, ವೈಶಾಖ, ಶುಕ್ಲ ಪಕ್ಷ 1829 ಪ್ಲವಂಗ, ಶಕ ಸಂವತ, ಅಕ್ಷಯ ತೃತೀಯ( 15 ಮೇ 1907) ದಂದು ಜನಿಸಿದ ಭಾರತಮಾತೆಯ ಇನ್ನೊಬ್ಬ ಸುಪುತ್ರರೇ ಸುಖದೇವ್ ಥಾಪರ್. ಯೌವನದ ಪರ್ವ ಕಾಲದಲ್ಲಿ ಉಳಿದ ಜೊತೆಗಾರರು ತಮ್ಮ ವೈಯಕ್ತಿಕ ಕನಸುಗಳ ಬಗೆಗೆ ಮೋಹ ಪರವಶರಾಗಿದ್ದರೆ ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯವನ್ನು ಕಂಡು ಈ ಯುವಕ ಭಾರತಮಾತೆಗೆ ತೊಡಿಸಿದ್ದ ಸಂಕೋಲೆಯನ್ನು ಕಿತ್ತೊಸೆಯುವ ಕನಸು ಕಂಡರು. ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್‌ಸಿಂಗ್ ಮತ್ತು ರಾಜಗುರುರವರ ಒಡನಾಡಿಯಾಗಿದ್ದವರು. "ಹಿಂದೂಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್" ಸೇರಿಕೊಂಡರು. " ನವಜವಾನ್ ಭಾರತ್ ಸಭಾ" ಎಂಬ ಯುವಪಡೆಯನ್ನು ಕಟ್ಟಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹಳ ಹುರುಪಿನಿಂದ ತೊಡಗಿಕೊಂಡು ಅನೇಕ ಭಾರತೀಯ ನವಯುವಕರಿಗೆ ಸ್ಪೂರ್ತಿಯ ಸೆಲೆಯಾದವರು. 1929 ರಲ್ಲಿ ನವದೆಹಲಿಯ ಸೆಂಟ್ರಲ್ ಅಸೆಂಬ್ಲಿ ಹಾಲಿನಲ್ಲಿ ಬಾಂಬರ ಎಸೆದ ಘಟನೆಯಲ್ಲಿ ಇವರು ಹಾಗೂ ಇವರ ಒಡನಾಡಿಗಳಾದ ಭಗತ್‌ಸಿಂಗ್, ರಾಜಗುರು ಇವರಿಗೆ ಬ್ರಿಟಿಷ್ ಆಡಳಿತ ಮರಣ ದಂಡನೆ ವಿಧಿಸಿತು. ತಮ್ಮನ್ನು ದೇಶಕ್ಕಾಗಿ ಸಮರ್ಪಿಸಿಕೊಂಡಾಗ ಸುಖದೇವ್‌ರವರ ವಯಸ್ಸು ಕೇವಲ 24.

ಹಿಂದೊಮ್ಮೆ ಇಂತಹ ವೀರ ಧೀರ ಸುಪುತ್ರರನ್ನು ಹೆತ್ತ ಭಾರತಮಾತೆ ಇಂದಿಗೂ ಇಂತಹ ಕೆಚ್ಚೆದೆಯ ಸುಪುತ್ರರನ್ನು ಬಯಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಇಂದು ಭಾರತಮಾತೆಯ ಒಡಲಲ್ಲಿ ತಾಯಿಗೆ ದ್ರೋಹವೆಸಗುವ ಪುತ್ರರೂ ಜನಿಸುತ್ತಿರುವುದು ಆಶ್ಚರ್ಯ. ಸಾವರ್ಕರ್ ಮತ್ತು ಸುಖದೇವ್‌ರಂತಹ ಸುಪುತ್ರರ ಜೀವನವನ್ನು ಓದಿ ತಿಳಿದುಕೊಳ್ಳುತ್ತಿರುವ ನಾವೆಲ್ಲರೂ ಇಂತಹ ಸುಪುತ್ರರೇ ಜನಿಸಿ ಭಾರತಮಾತೆಯ ಕೀರ್ತಿ ಪತಾಕೆಯನ್ನು ಇಡೀ ವಿಶ್ವದಲ್ಲಿಯೇ ಸಾರುವಂತೆ ಮಾಡಬೇಕಾಗಿದೆ. ತಮ್ಮ ಯೌವನದ ಪರ್ವ ಕಾಲದಲ್ಲಿ ತಮ್ಮ ವೈಯಕ್ತಿಕ ಕನಸುಗಳನ್ನು ತ್ಯಜಿಸಿ ಭಾರತಮಾತೆಯ ಸಂಕೋಲೆಯನ್ನು ಬಿಡಿಸಲು ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟ ಇಂತಹ ಧೀಮಂತ ಸುಪುತ್ರರಿಗೆ ನಾವು ನೀವೆಲ್ಲರೂ ಚಿರಋಣಿಗಳಾಗಿರಬೇಕು.

ಸಂಪಾದಕ

## ಸೂಕ್ತಿ



ಓಂ। ಈಶಾವಾಸ್ಯಮಿದಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ
ಮಾ ಗೃಧಃ ಕಸ್ಯಸ್ವಿದ್ಧನಂ॥

ಈ ಜಗತ್ತಿನಲ್ಲಿ ಏನೇನಿದೆಯೋ ಅದೆಲ್ಲವೂ ಭಗವಂತನಿಂದ ಆವರಿಸಲ್ಪಡತಕ್ಕಂತಹುದು. ಆದ್ದರಿಂದ ತ್ಯಾಗದಿಂದ ನಿನ್ನನ್ನು ಕಾಪಾಡಿಕೋ. ಬೇರೆಯವರ ಧನವನ್ನು ಬಯಸಬೇಡ.

## ಪರಿವಿಡಿ


- ಕ್ರಾಂತಿ ಶಿರೋಮಣಿ ವಿನಾಯಕ ದಾಮೋದರ ಸಾವರ್ಕರ್ 3
- ಇಮಿತಿಯಾಚೆಗಿನ ಮಿಂಚು ಬದುಕಿನ ಸವಾಲು 4
- ಅಪೂರ್ವ ಸಹೋದರಿಯರು 7
- ಶಿಕ್ಷಕರೇ ನಿಮ್ಮ ಪ್ರತಿನಿಧಿ ಹೇಗಿರಬೇಕು? 8
- ವಿಶ್ವ ಪರಿಸರ ದಿನ 9
- ಹೊಸ ವರ್ಷ–ಹೊಸ ಹರ್ಷ 10
- ಶಿಕ್ಷಣದ ನೆಪದಲ್ಲಿ ಶಿಕ್ಷೆ ಕೊಟ್ಕೊಳ್ಳೋದು ನಿಲ್ಸಿ ಪ್ಲೀಸ್...! 11
- ಚುನಾವಣೆ ಮುಗಿದಿದೆ. ಮುಂದೇನು? 13
- ಜನ–ಮನಕೆ ತಂಪುಣಿಸುವ ಅರಳಿಮರ 15

# ಕ್ರಾಂತಿ ಶಿರೋಮಣಿ ವಿನಾಯಕ ದಾಮೋದರ ಸಾವರ್ಕರ್

**ಶ್ರೀಮತಿ ಆರ್. ಸೀತಾಲಕ್ಷ್ಮಿ**
**ನಿವೃತ್ತ ಉಪಪ್ರಾಂಶುಪಾಲರು**
**ಬೆಂಗಳೂರು**



**ಜು**ಲೈ 1, 1910 ಎಸ್.ಎಸ್. ಮೋರಿಯಾ ಎಂಬ ಹಡಗು ಬ್ರಿಟಿಷ್ ಕಡಲ್ಗಾಲುವೆಯಲ್ಲಿ ನಿಧಾನವಾಗಿ ಚಲಿಸುತ್ತಾ ಎಲ್ಲೂ ನಿಲ್ಲಬಾರದೆಂಬ ಆಜ್ಞೆ ಹೊತ್ತು ಬಿಸ್ಕೆ ಕೊಲ್ಲಿಯ ಮೂಲಕ ಭಾರತದತ್ತ ಹೊರಟಿದೆ. ಹಾದಿಯಲ್ಲಿ ಫ್ರಾನ್ಸ್‌ನ ಮಾರ್ಸೆಲ್ ಬಂದರು. ಅನಿವಾರ್ಯವಾಗಿ ನಿಲ್ಲಬೇಕಾಯಿತು. ಹಡಗಿನಲ್ಲಿದ್ದ ಕೈದಿಯೋರ್ವ ಶೌಚಾಲಯದ ಕಿಟಕಿಯ ಮೂಲಕ ನೋಡಿದ ಸಮುದ್ರ ತೀರ ಕೇವಲ 50 ಗಜ ದೂರದಲ್ಲಿ ಕಾಣುತ್ತಿದೆ.

ಅಂದು ಜುಲೈ 7 ರ ರಾತ್ರಿ ಹಡಗಿನ ಕಾವಲು ಸೈನಿಕರ ಸರ್ಪಗಾವಲು, ಎಲ್ಲರಿಗೂ ನಿದ್ರೆ, ಆವರಿಸಿದರೆ ಇವನಿಗೆ ಮಾತ್ರ ದಡಸೇರುವ ಚಿಂತೆ. 8 ರ ಬೆಳಗಿನ ಸೂರ್ಯ ಮೂಡಿದ. 36 ಇಂಚಿನ ಶೌಚಾಲಯದ ಗವಾಕ್ಷಿಯತ್ತ ನೆಗೆದ. ಮೈಮುದುಡಿಸಿ ಕಿಟಕಿಯಲ್ಲಿ ತೂರಿ ಕಡಲಿಗೆ ಹಾರಿದ. ಮೈ ಕೈ ತರಚಿದೆ, ರಕ್ತ ಜಿನುಗುತ್ತಿದೆ. ಉಪ್ಪಿನ ನೀರಿನಿಂದಾಗಿ ಮೈ ಭಯಂಕರ ಉರಿಯುತ್ತಿದೆ. ಆದರೆ ಗುರಿ ನಿಶ್ಚಯವಿದೆ. ಎಚ್ಚೆತ್ತ ಕಾವಲುಗಾರರ ಗುಂಡುಗಳಿಂದ ತಪ್ಪಿಸಿಕೊಂಡು ಮಾರ್ಸೆಲ್ ಬಂದರು ತಲುಪಿ ರಸ್ತೆಯಲ್ಲಿ ಓಡುತ್ತಿರುವ ಕೈದಿಯನ್ನು ಫ್ರೆಂಚ್ ಪೋಲೀಸರ ಕೈ ಬೆಚ್ಚಗೆ ಮಾಡಿದ ಬ್ರಿಟಿಷ್ ಸೈನಿಕರು ಕೈದಿಯ ಕೈಕಾಲಿಗೆ ಬೇಡಿ ತೊಡಿಸಿ ಹಡಗಿಗೆ ಸಾಗಿಸಿದರು. ಮರುದಿನ ಫ್ರಾನ್ಸಿನ ಪತ್ರಿಕೆಗಳಲ್ಲಿ ಈ ಯುವಕೈದಿಯ ಸಾಹಸ ಗಾಥೆ ಓದಿದ ಜಗತ್ತು ದಿಗ್ಭ್ರಮೆಗೊಂಡಿತು. ಜುಲೈ 8, 1910 ರ ಶುಕ್ರವಾರ, ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ದಾಖಲಾಯಿತು.

ಯಾರು ಈ ಸಾಹಸ ಮೆರೆದ 28ರ ಯುವಕ! ಆತನೇ "ವಿನಾಯಕ ದಾಮೋದರ ಸಾವರಕರ್". ಸಾವರ್‌ಕರ್ ತಮ್ಮ ಸಂಪೂರ್ಣ ಜೀವನವನ್ನು ಭಾರತದ ಸ್ವಾತಂತ್ರ್ಯಕ್ಕಾಗಿ ಮುಡುಪಿಟ್ಟ ಅಭಿಜಾತ ದೇಶಭಕ್ತ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿ ಶಿರೋಮಣಿ, ಅಪ್ರತಿಮ ವಾಗ್ಮಿ, ಮಹಾನ್ ಲೇಖಕ, ಕವಿ, ತತ್ವಶಾಸ್ತ್ರಜ್ಞ, ಸಮಾಜಸೇವಕ, ಇತಿಹಾಸಕಾರ, ಒಂದೇ ಜೀವನದಲ್ಲಿ ಎರಡು ಆಜೀವನ ಕಾರಾಗೃಹ ಶಿಕ್ಷೆಗೊಳಗಾದ, ಇತಿಹಾಸ ನಿರ್ಮಾಪಕ. ಒಂದೆರಡಲ್ಲ ಅವರ ಪ್ರತಿಭೆಯ ಮಿಂಚು, ಅನರ್ಘ್ಯ ಪ್ರತಿಭಾ ಭಂಡಾರ.

ವಿನಾಯಕ ಹುಟ್ಟಿದ್ದು 1883 ಮೇ 28ರ ಸೋಮವಾರ, ಮಹಾರಾಷ್ಟ್ರದಲ್ಲಿನ ನಾಸಿಕ್ ತಾಲ್ಲೂಕಿನಲ್ಲಿರುವ ಭಗೂರ್ ಎಂಬ ಗ್ರಾಮದಲ್ಲಿ. ತಂದೆ ದಾಮೋದರ ಸಾವರ್‌ಕರ್, ತಾಯಿ ಯೆಶೋದಾ ಸಾವರ್‌ಕರ್. ದೊಡ್ಡಪ್ಪ ಮತ್ತು ತಂದೆಯೇ ತಾಯಿಯ ಮಮತೆ, ಪ್ರೀತಿ, ಸಂಸ್ಕಾರ ಎಲ್ಲವನ್ನು ನೀಡಿದುದು. 1857ರ ಸ್ವಾತಂತ್ರ್ಯ ಸಂಗ್ರಾಮವನ್ನು ಕಂಡಿದ್ದ ದೊಡ್ಡಪ್ಪನ ಬಾಯಲ್ಲಿ ಝಾನ್ಸಿರಾಣಿ, ತಾತ್ಯಾಟೋಪೆ ಇವರ ಸಾಹಸ, ಪರಾಕ್ರಮ, ಬಲಿದಾನದ ಕಥೆ ಕೇಳಿದ್ದ ಪುಟ್ಟ ವಿನಾಯಕನಿಗೆ ತಾನೂ ಅವರಂತೆ ಸ್ವಾತಂತ್ರ್ಯಕ್ಕಾಗಿ ದುಡಿಯಬೇಕೆಂಬ ಸಂಕಲ್ಪ ಮೈಗೂಡಿತು.

ತನ್ನ ಪ್ರಾರಂಭಿಕ ವಿದ್ಯಾಭ್ಯಾಸವನ್ನು ನಾಸಿಕದಲ್ಲಿ ಮುಗಿಸಿ ಕಾಲೇಜು ವಿದ್ಯಾಭ್ಯಾಸಕ್ಕೆ ಅಂದಿನ ರಾಜಕೀಯ ಕೇಂದ್ರ ಪುನಾಗೆ ವಿನಾಯಕ ಬಂದ. ಇಲ್ಲಿಯೇ ಸಾವರ್‌ಕರ್ ಅವರ ವ್ಯಕ್ತಿತ್ವ ಪೂರ್ಣವಾಗಿ ಅರಳಿದ್ದು. ಬಾಲ್ಯದಲ್ಲಿ ಕಾಳಿಮಾತೆಯ ಎದುರಿಗೆ ದೇಶವಿಮುಕ್ತಿಗಾಗಿ ಬದುಕನ್ನು ಮೀಸಲಿಡುವ ಪ್ರತಿಜ್ಞೆಯನ್ನು ಮರೆಯದೆ 'ಮಿತ್ರಮೇಳ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಗಣೇಶೋತ್ಸವವನ್ನು ಸಂಘಟಿಸಿದರು. ಶಿವ ಜಯಂತ್ಯೋತ್ಸವದ ಹೆಸರಿನಲ್ಲಿ ತರುಣರಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ರೇರಣೆ ನೀಡಿದರು. ಆ ವೇಳೆಗೆ ಪೂನಾಗೆ ಪ್ಲೇಗಿನ ಮಾರಿ ಬಂದಳು. ಆಗ ವಿನಾಯಕ ನಾಗರೀಕರಿಗೆ ನೆರವು, ರೋಗಿಗಳ ಆರೈಕೆ ಮುಂತಾದ ಸಾಮಾಜಿಕ ಸೇವೆಯಲ್ಲಿ ತನ್ನ ಗೆಳೆಯರ ಬಳಗದೊಂದಿಗೆ ತೊಡಗಿಕೊಂಡ. ವಿದೇಶೀ ವಸ್ತ್ರ ಸುಡುವ ಸ್ವದೇಶೀ ಚಳುವಳಿಗೆ ಓಂಕಾರ ಹಾಡಿದ್ದೂ ವಿನಾಯಕನೇ.

ಫರ್ಗುಸನ್ ಕಾಲೇಜಿನಿಂದ ತನ್ನ ಬಿ.ಎ ಪದವಿ ಪಡೆದು ಶ್ಯಾಮಜಿ ಕೃಷ್ಣವರ್ಮರ 'ಶಿವಾಜಿ ವಿದ್ಯಾರ್ಥಿವೇತನ' ಪಡೆದು ಸಾವರ್‌ಕರ್ ಬ್ಯಾರಿಸ್ಟರ್ ಪದವಿ ಪಡೆಯಲು ಲಂಡನ್‌ಗೆ ತೆರಳಿದ್ದು ಕೇವಲ ವಕೀಲ ಪದವಿ ಗಳಿಕೆಗಾಗಿ ಅಲ್ಲ. ಬದಲಿಗೆ ಸಿಂಹದ ಗುಹೆಗೆ ನುಗ್ಗಿ ಅದರ ಕೇಸರ ಹಿಡಿದು ಅದನ್ನು ಪಳಗಿಸುವುದಕ್ಕಾಗಿ.

ಲಂಡನ್‌ನ ಭಾರತಭವನದಲ್ಲಿ ವಿನಾಯಕನ ವಾಸ. ಸಾವರಕರ್ ಬಂದ ನಂತರ ಭಾರತಭವನ ಸ್ವಾತಂತ್ರ್ಯ ಹೋರಾಟ ಗಾರರ ಭವನವಾಗಿ ಮಾರ್ಪಟ್ಟಿತು. ಅಲ್ಲೇ ಅವರು ಇಟಲಿಯ ಕ್ರಾಂತಿವೀರ ಮಾಟ್ಸಿನಿಯ ಆತ್ಮಚರಿತ್ರೆಯನ್ನು ಮರಾಠಿಗೆ ಅನುವಾದಿಸಿದ್ದು. 'ಸಿಪಾಯಿದಂಗೆ' ಎಂದು ಬ್ರಿಟಿಷರು ಕರೆದಿದ್ದನ್ನು ಅವರ ಲೈಬ್ರರಿಯಲ್ಲೇ ಕೂತು ಓದಿ, ಸತ್ಯ ಸಂಗತಿಗಳನ್ನು ಕಲೆಹಾಕಿ 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂಬ ಪುಸ್ತಕವನ್ನು ರಚಿಸಿದ್ದು. ಈ ಪುಸ್ತಕಕ್ಕೆ ಪ್ರಕಟಣೆಯ ಮುನ್ನವೇ ಸರ್ಕಾರವೊಂದು ಬಹಿಷ್ಕಾರ ಹೇರಿದ್ದು ಎಂಬ ಕೀರ್ತಿ ಇದೆ.

ಬಣ್ಣದ ಚಿಟ್ಟೆಯಂತೆ ಸುಖ ಲೋಲುಪತೆಯಲ್ಲಿ ತೇಲಾಡುತ್ತಿದ್ದ ಮದನಲಾಲ್ ಧಿಂಗ್ರ ಎಂಬ ಯುವಕನ ಹೃದಯದಲ್ಲಿ ಸ್ವಾತಂತ್ರ್ಯದ ದೀಪ ಬೆಳಗಿ ಅವನು ಕರ್ಜನ್ ವೈಲಿ ಎಂಬ ಭಾರತ ದ್ರೋಹಿಯನ್ನು ಹತ್ಯೆ ಮಾಡುವಂತೆ ಪ್ರೇರಣೆ ನೀಡಿದ್ದು ಇದೇ ಸಾವರ್‌ಕರ್.

ಸಾವರ್‌ಕರ್‌ರವರ ಈ ಎಲ್ಲ ಚಟುವಟಿಕೆಗಳ ಫಲವಾಗಿ ಅವರನ್ನು 1910 ಜೂನ್‌ನಲ್ಲಿ ದೇಶದ್ರೋಹಿ ಎಂಬ ಆಪಾದನೆ ಹೊರಿಸಿ ಬಂದಿಸಿದ ಬ್ರಿಟಿಷ್ ಸರ್ಕಾರ ಭಾರತಕ್ಕೆ ವಿಚಾರಣೆಗಾಗಿ ಹಡಗಿನಲ್ಲಿ ಕಳಿಸಿತು. ಆಗಲೇ ಹಡಗಿನಿಂದ ಹಾರಿ ಆಳ ಸಮುದ್ರ ದಲ್ಲಿ ಈಜಿ ಸಾವರ್‌ಕರ್ ಸಾಹಸ ಮೆರೆದ ಘಟನೆ ನಡೆದುದು.

30.1.1911ರಂದು ಸಾವರ್‌ಕರ್ ಅವರಿಗೆ ಆಂಗ್ಲ ನ್ಯಾಯಾಧೀಶ ಎರಡು ಆಜನ್ಮ ಕಾರಾಗೃಹ ವಾಸ ಕರುಣಿಸಿದ. ಮುಂಬೈಯಿಂದ ಅವರನ್ನು ಅಂಡಮಾನ್‌ಗೆ ಸಾಗಿಸಿದರು. ಅಂಡಮಾನ್‌ನ ಸೆಲ್ಯುಲರ್ ಜೈಲೆಂದರೆ ಅದು ಪ್ರತ್ಯಕ್ಷ ಯಮಲೋಕ. ಹೃದಯದಲ್ಲಿ ದೇಶ ಭಕ್ತಿಯ ಅದಮ್ಯ ಪ್ರೇರಣೆ ಇಲ್ಲದ ಯಾವುದೇ ವ್ಯಕ್ತಿ ಅಂಡಮಾನ್ ಹೆಸರು

**ಪುಟ 13 ಕ್ಕೆ ➤**



# ಮಿತಿಯಾಚೆಗಿನ ಮಿಂಚು ಬದುಕಿನ ಸವಾಲು

**ಶ್ರೀ ರಘುರವರು ಕಾಲೇಜು ಅಧ್ಯಾಪಕರು. ವ್ಯಕ್ತಿತ್ವ ವಿಕಸನದ ಮಾರ್ಗದರ್ಶಕರು. ವ್ಯಕ್ತಿ ನಿರ್ಮಿತಿಯ ಕನಸು ಹೊತ್ತಿರುವ 'ವಿವೇಕಹಂಸ' ಮಾಸ ಪತ್ರಿಕೆಯ ಸಂಪಾದಕರು 'ಮಾನವ ಅಪರಿಮಿತ ಶಕ್ತಿಯ ಆಗರ. ಅವನು ಮನಸ್ಸು ಮಾಡಿದರೆ ಸಾಧನೆಯ ಮೂಲಕ ದೈವತ್ವಕ್ಕೇರ ಬಲ್ಲ' ಎಂಬ ವಿವೇಕ ವಾಣಿಗೆ ಅಕ್ಷರ ರೂಪ ಕೊಟ್ಟಿರುವ ಅವರ ಈ ಲೇಖನದಲ್ಲಿ ಹಂತ ಹಂತವಾಗಿ ಗೆಲುವಿನ ಸೋಪಾನವನ್ನು ಏರುವ ಕ್ರಮವನ್ನು ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ಸಂಗ್ರಹಿಸಿಟ್ಟುಕೊಳ್ಳಲು ಮರೆಯದಿರಿ.ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಅವರ ಈ ಲೇಖನವನ್ನು ಆಗಾಗ್ಗೆ ಓದಿ, ಬಾಳಿಗೆ ಬಾಳಿಗೆ ಬೆಳಕಿನ ಕಿಂಡಿಯಾದೀತು.**

'ತನ್ನನ್ನು ಕೆಳಕ್ಕೊತ್ತುತ್ತಿರುವ ಪರಿಸರ, ಪರಿಸ್ಥಿತಿಗಳಲ್ಲಿ ಜೀವಿಯ ವಿಕಸನ ಮತ್ತು ಮುನ್ನಡೆಯೇ ಜೀವನ' ಎಂದು ಸ್ವಾಮಿ ವಿವೇಕಾನಂದರು ಜೀವನದ ಬಗೆಗಿನ ತಮ್ಮ ಸೂಕ್ತಿಯಲ್ಲಿ ತಿಳಿಸಿದ್ದಾರೆ. ಬಹುಶಃ ಬದುಕನ್ನು ಅದರ ಸಾರವನ್ನು ಹೀಗೆ ಒಂದು ಸಾಲಿನಲ್ಲಿ ತಿಳಿಸಲು ಸ್ವಾಮಿ ವಿವೇಕಾನಂದರಿಗೆ ಮಾತ್ರ ಸಾಧ್ಯ. ಮೇಲಿನ ಜೀವನ ಸೂತ್ರದಲ್ಲಿ ಆಧ್ಯಾತ್ಮದ ಲೇಪವನ್ನು ಕಾಣೆವು. ಹಾಗೆ ಅದು ಅತಿ ಸರಳ ಎಂದು ತಳ್ಳಿ ಹಾಕುವಂತೆಯೂ ಇಲ್ಲ. ಬದುಕಿನ ಸಮಗ್ರ ಸ್ವರೂಪವನ್ನು ಈ ವಾಕ್ಯ ತನ್ನಲ್ಲಿ ಅಡಗಿಸಿಕೊಂಡಿದೆ. ಅದರ ಅರ್ಥವನ್ನು ಭಾವಿಸುತ್ತ ಹೋದಂತೆ ಬದುಕಿನ ವ್ಯಾಪಾರವೂ ವಿಸ್ತಾರವಾಗುತ್ತ ಹೋಗುತ್ತದೆ. ಜೀವನ ಕಷ್ಟಮಯ ಎಂದು ದೂರುವವರಿಗೆ, ಸಂಕಟಗಳ ಸರಮಾಲೆ ಎಂದು ದುಃಖಿಸುವವರಿಗೆ ಕಷ್ಟ, ಸಂಕಟಗಳೇ ಬದುಕಲ್ಲ ಸಾವು, ಚಲನ ಶೀಲವಾಗಿಲ್ಲದ ಬದುಕು, ಮರಗಟ್ಟಿದ ಜೀವನ, ಬದಲಾವಣೆಯಿಲ್ಲದ ರೀತಿ, ನಿಂತ ನೀರಿನಂತೆ- ಅದು ಕೊಳೆತು ನಾರುತ್ತದೆಯೇ ಹೊರತು ಚಲಿಸಿ ಜೀವಧಾರೆಯಾಗುವುದಿಲ್ಲ. ಬದುಕಿನ ಸವಾಲಿರುವುದು ಅದು ನಿರ್ಮಿಸುವ ಮಿತಿಯನ್ನು ಮೀರುವುದರಲ್ಲಿ, ಅರ್ಥಾತ್ ಸಾಮರ್ಥ್ಯಗಳನ್ನು ಮಿತಿ ಮೀರಿ ಬಳಸುವುದರಲ್ಲಿ.

ನಮ್ಮ ಸಾಮರ್ಥ್ಯಗಳನ್ನು ಶಕ್ತಿಮೀರಿ ಬಳಸಬೇಕು ಎಂದುಕೊಳ್ಳುವುದು ಸುಲಭ. ಆದರೆ ನಮ್ಮೊಂದಿಗೇ ಹುಟ್ಟಿ ಬೆಳೆದಿರುವ ಜಡತ್ವ, ಸೋಮಾರಿತನ, ಆಲಸ್ಯ, ಬೇಜವಾಬ್ದಾರಿತನ- ಇವೆಲ್ಲ ಸೇರಿ 'ಇಂದಿಗೆ ಇಷ್ಟು ಸಾಕು' ಹಾಸಿಗೆ ಇದ್ದಷ್ಟು ಕಾಲು ಚಾಚು' ವಿಪರೀತ ಆಯಾಸ ಮಾಡಿಕೊಳ್ಳಬೇಡ ಇತ್ಯಾದಿ ಹಿತವಾದ ಉಪದೇಶ ಮಾಡಿ ಇಂದಿನವನ್ನು ನಾಳೆಗೆ, ನಾಳೆಯದನ್ನು ಮುಂದಿನ ದಿನಕ್ಕೆ ಹೀಗೆ ಮುಂದೆ ಹಾಕುವ ಅಭ್ಯಾಸ ರೂಢಿಯಾಗಿ ಬಿಡುತ್ತದೆ. ನಮಗೆಲ್ಲ ತಿಳಿದಿರುವಂತೆ ಮೊದಲ ನಿಲ್ದಾಣದಲ್ಲಿ ಐದು ನಿಮಿಷ ತಡವಾಗಿ ಹೊರಟ ರೈಲು ಕೊನೆಯ ನಿಲ್ದಾಣ ತಲುಪುವ ವೇಳೆಗೆ ಐದು ಗಂಟೆ ತಡವಾಗಿರುತ್ತದೆ, ಜೀವನವೂ ಅಷ್ಟೆ. ಗುರಿ ತಲುಪಲು ನಾವು ಮಾಡುವ ಸಣ್ಣಪುಟ್ಟ ಮುಂದೂಡಿಕೆಗಳು ಗುರಿಯನ್ನು ನಮ್ಮಿಂದ ವರ್ಷಗಟ್ಟಲೆ ದೂರಮಾಡುತ್ತದೆ. ಹೀಗಾಗದಂತೆ ಎಚ್ಚರ ವಹಿಸಬೇಕು, ಗುರಿ-ದಾರಿಗಳನ್ನು ಸದಾ ಗಮನದಲ್ಲಿಟ್ಟು ಕೊಳ್ಳಬೇಕು, ಇದಕ್ಕಾಗಿ ನಾವು ಹಲವು ಸೂತ್ರಗಳನ್ನು ಪಾಲಿಸಬೇಕು, ಕೆಲವು ಗಟ್ಟಿ ನಿರ್ಧಾರಗಳನ್ನು ಕೈಗೊಳ್ಳಬೇಕು. ಅವುಗಳಲ್ಲಿ ಕೆಲವು:

1. ನನ್ನ ನಾಳಿನ ಕನಸನ್ನು ನನಸು ಮಾಡಲು ಇಂದೇ ಕಾರ್ಯಪ್ರವೃತ್ತನಾಗುತ್ತೇನೆ: ಕನಸು ಕಾಣಲು ಕಾಸು ಕೊಡಬೇಕಾಗಿಲ್ಲ. ಆದರೆ ಅದನ್ನು ನನಸು ಮಾಡಿಕೊಳ್ಳುವ ಕಸುವು ಗಳಿಸಬೇಕು. ಹೀಗೆಯೇ ಓದುತ್ತೇನೆ ಎಂದು ವೇಳಾಪಟ್ಟಿ ತಯಾರಿಸಿ ನಂತರ ಅರ್ಧಗಂಟೆ ವಿಶ್ರಾಂತಿ ಪಡೆಯುವ ಎಷ್ಟೋ ವಿದ್ಯಾರ್ಥಿಗಳಿದ್ದಾರೆ. ರಾತ್ರಿ ಓದಲು ಕುಳಿತು, ಆಕಳಿಕೆ, ತೂಕಡಿಕೆ ಮೂಡಿ ಬೆಳಗ್ಗೆಗೆ ಅಲಾರಾಂ ಇರಿಸಿ, ಅದು ಮೊಳಗುತ್ತಿದ್ದಂತೆಯೇ ಗಡಿಯಾರದ ತಲೆ ಬಡಿದು ಮುಸುಕೆಳೆದು ಮಲಗಿದರೆ ಪರೀಕ್ಷೆಯಲ್ಲಿ ಅಂಕಗಳೂ ಮುಸುಕೆಳೆದು ಬಿಡುತ್ತವೆ. ಇಂದೇ ಕಾರ್ಯಪ್ರವೃತ್ತರಾಗುವುದು ಬಹಳ ಮುಖ್ಯ. ಇದು ಎಲ್ಲ ಕ್ಷೇತ್ರಕ್ಕೂ ಅನ್ವಯ.

2. ಜೀವನವಿಡೀ ನಾನು ಕಲಿಕೆಗೆ, ಬೆಳವಣಿಗೆಗೆ ಮತ್ತು ಬದಲಾವಣೆಗೆ ಸಿದ್ಧನಿರುತ್ತೇನೆ. ಹಿಂದೆಯೇ ಗಮನಿಸಿದಂತೆ ಬದುಕು ಚಲನಶೀಲವಾದುದು. ಹೊಸತನ್ನು ಸ್ವೀಕರಿಸಲು, ಕಲಿಯಲು ಮನಸ್ಸು ಸಿದ್ಧವಿರಬೇಕು, ಬದಲಾವಣೆಗೆ ಒಪ್ಪಿಕೊಳ್ಳಬೇಕು, ಬೆಳವಣಿಗೆಗೆ ತಯಾರಾಗಿರಬೇಕು. ಕಲಿಕೆ ಎಂಬುದು ಸಾಂಪ್ರದಾಯಿಕ ಶಿಕ್ಷಣಕ್ಕೆ ಸೀಮಿತವಲ್ಲ. ಕಾಲೇಜು, ಶಾಲೆ ಅಧ್ಯಾಪಕರು, ಅವರು ನಿರಂತರ ಬೋಧಿಸುತ್ತಾರಾದ್ದರಿಂದ ಅವರು ಮಾತ್ರ ಸದಾ ಕಲಿಯುತ್ತಿರಬೇಕು ಎಂದಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಕಲಿಯುವುದು ಇದ್ದೇ ಇದೆ. ಕಚೇರಿಯ ಕೈ ಕೆಲಸದವನಲ್ಲೂ ನಾವು ಕಲಿಯಬೇಕಾದ್ದು ಇದೆ. ಕಲಿಯುವ ಮನಸ್ಸಿರಬೇಕು ಅಷ್ಟೆ. ಕಲಿತ ಬಳಿಕ ಬೆಳವಣಿಗೆ, ಪರಿಣಾಮವಾಗಿ ಬದಲಾವಣೆಗೆ ಸಹಜ. ಇವಿಲ್ಲದೆ ಬದುಕು ನಿಂತ ನೀರಾಗುತ್ತದೆ.

3. ನಾನು ನನಗೆ ಬೇಕಾದಂತೆ ಬದುಕು ರೂಪಿಸಿಕೊಳ್ಳುತ್ತೇನೆ 'ನಡೆಸಿದಂತಾಗಲಿ' ಎಂಬ ಧೋರಣೆಯಿಂದ ದೂರಾಗುತ್ತೇನೆ.: ಯಾರು ಜೀವನವನ್ನು ತಮ್ಮ ಹಿಡಿತದಲ್ಲಿ ಇರಿಸಿಕೊಳ್ಳುತ್ತೇವೆ ಎಂಬ ಪಣತೊಡುತ್ತಾರೊ ಅವರ ಮನೋಭಾವ ಇದು. ನನ್ನದೇ ಬದುಕು, ನಾನು ಇದರ ರೂವಾರಿ ಎಂಬ ಭಾವ ಅವರಲ್ಲಿ ಗಟ್ಟಿಯಾಗಿರುತ್ತದೆ. ಹಣೆ ಬರಹ, ವಿಧಿ, ಭಗವಂತನ ಇಚ್ಛೆ ಎಂಬ ನೆಪವೊಡ್ಡಿ ಜೀವನದ ಜವಾಬ್ದಾರಿಗಳಿಂದ ಜಾರಿಕೊಳ್ಳಲು ಇಂಥವರು ಪ್ರಯತ್ನಿಸುವುದಿಲ್ಲ. ಸಮುದ್ರದ ಮೇಲೆ ಹಡಗು ನಡೆಸಿದಂತೆ, ಪ್ರತಿಕೂಲ ಗಾಳಿ ಬೀಸಿದಾಗಲೂ ಹಾಯಿಪಟವನ್ನು ಸೂಕ್ತವಾಗಿ ಬಳಸಿ ನಮಗೆ

**ಪುಟ 5 ಕ್ಕೆ** ➤

**ಸೋಲು ಎನ್ನುವುದು ಶಾಶ್ವತ ಸ್ಥಿತಿಯಲ್ಲ, ಪ್ರಯತ್ನವಿಲ್ಲದಿರುವುದೇ ಸೋಲಿನ ಶಾಶ್ವತ ಸ್ಥಿತಿ.**

➢ ಪುಟ 4 ರಿಂದ.....

ಬೇಕಾದ ದಿಕ್ಕಿನಲ್ಲಿ ಹಡಗು ಚಲಿಸುವಂತೆ ಮಾಡಬಹುದು. ಜೀವನದಲ್ಲಿಯೂ ಅಂತೆಯೇ ಪ್ರತಿಕೂಲ ಪರಿಸ್ಥಿತಿಯನ್ನೂ ನಮ್ಮ ಗುರಿ ಸಾಧನೆಗೆ ಅನುಕೂಲವಾಗುವಂತೆ ಪರಿವರ್ತಿಸಿಕೊಳ್ಳಬಹುದು. ಜೀವನದ ಘಟನಾವಳಿಗಳು ನಮ್ಮನ್ನು ನಿಯಂತ್ರಿಸದೆ ನಾವು ಅವುಗಳನ್ನು ನಿಯಂತ್ರಿಸುವಂತಾಗಬೇಕು.

4. ನನ್ನ ಗುರಿ ಸಾಧನೆಗಾಗಿ ನಾನು ಮಾಡುವ ಪ್ರಯತ್ನ ಒಂದು ಸದವಕಾಶವೇ ಹೊರತು ತ್ಯಾಗವಲ್ಲ: ವ್ಯಕ್ತಿ ತನ್ನ ಗುರಿಸಾಧನೆಗಾಗಿ ಮಾಡುವ ಪ್ರಯತ್ನಗಳೆಲ್ಲ ಅವನಿಗೆ ದೊರೆತ ಸದವಕಾಶವೇ ಹೊರತು, ಇವು ಅವನು ಮಾಡುವ ತ್ಯಾಗವಲ್ಲ. ನಿದ್ರೆಗೆಟ್ಟು ಓದಿ ರ‍್ಯಾಂಕ್ ಪಡೆದದ್ದು, ನಿದ್ರೆಯ ತ್ಯಾಗವಲ್ಲ ಆದರೆ ರ‍್ಯಾಂಕ್ ಗಳಿಸುವ ಅವಕಾಶ. ಬಹುಜನರು ತಮ್ಮ ಗುರಿಸಾಧನೆಗಾಗಿ ಬಹಳ ತ್ಯಾಗ ಮಾಡಿರುವುದಾಗಿ ಹೇಳಿಕೊಳ್ಳುವುದನ್ನು ಕೇಳುತ್ತೇವೆ. ಆದರೆ ವಾಸ್ತವ ಬೇರೆ. ಅದು ಅವರಿಗೆ ದೊರೆತ ಅವಕಾಶ, ವೈದ್ಯರು ಹೇಳುವ ಪಥ್ಯಾಹಾರದಂತೆ ಇದು. ಆರೋಗ್ಯಲಾಭದ ಬಗ್ಗೆ ಯೋಚಿಸಬೇಕೇ ಹೊರತು ಆಹಾರ ತ್ಯಾಗದ ಬಗ್ಗೆ ಅಲ್ಲ. ಶ್ರಮಪಡದೆ, ಬೆವರು ಹರಿಯದೆ ಯಾವುದೇ ಸಿದ್ಧಿ ಇಲ್ಲ. ಆದುದರಿಂದ ಗುರಿಗಾಗಿ ಸಾಧನೆಯ ಅವಕಾಶ ದೊರೆತಿದ್ದಕ್ಕಾಗಿ ಸಂತೋಷಪಡಬೇಕು.

5. ನಾನು ವ್ಯವಸ್ಥೆಗಳನ್ನು ಪ್ರಶ್ನಿಸುವುದಕ್ಕಿಂತ, ಅದು ನನ್ನ ಗುರಿಸಾಧನೆಗೆ ಹೇಗೆ ನೆರವಾಗಬಲ್ಲದು ಎಂದು ಆಲೋಚಿಸುತ್ತೇನೆ: ಈ ಪ್ರಪಂಚದಲ್ಲಿ ಯಾವ ವ್ಯವಸ್ಥೆಯೂ ಪರಿಪೂರ್ಣವಲ್ಲ. ಆದುದರಿಂದ ವ್ಯವಸ್ಥೆಗಳನ್ನು ದೂರುವುದನ್ನು ಬಿಟ್ಟು ಅವು ನಮ್ಮ ಗುರಿಸಾಧನೆಗೆ ಹೇಗೆ ನೆರವಾಗಬಲ್ಲವು ಎಂಬುದರ ಬಗ್ಗೆ ಆಲೋಚಿಸಬೇಕು. ಪಾದರಕ್ಷೆಯಿಲ್ಲವೆಂದು ಕೊರಗುತ್ತಿದ್ದವ ಪಾದಗಳೇ ಇಲ್ಲದವನನ್ನು ಕಂಡಾಗ ತನ್ನ ಸ್ಥಿತಿಯ ಬಗ್ಗೆ ಸಮಾಧಾನಪಟ್ಟುಕೊಂಡಂತೆ, ಜಗತ್ತಿನಲ್ಲಿ ಅರೆ–ಕೊರೆಗಳು ಇದ್ದೇ ಇರುತ್ತವೆ. ಅವುಗಳ ಬಗ್ಗೆ ಚಿಂತಿಸದೆ, ದೂರದೆ, ಕೊರಗದೆ ನಮ್ಮ ಗುರಿ ಸಾಧನೆಗೆ ಅವು ಹೇಗೆ ನೆರವಾಗಬಲ್ಲವು ಎಂದು ಆಲೋಚಿಸಬೇಕು. ಬ್ರಿಟಿಷರ ಆಳರಸ ಮನೋಭಾವ, ಧಾರ್ಷ್ಟ್ಯ ಎಂತಂಹವರನ್ನೂ ಕಂಗೆಡೆಸುವಂತಹದ್ದು. ಆದರೆ ಗಾಂಧಿಜೀ ತಮ್ಮ ಸ್ವಂತ ಜೀವನದ ನಿರ್ಮಾಣಕ್ಕೂ, ರಾಷ್ಟ್ರಜೀವನದ ಔನ್ನತ್ಯಕ್ಕೂ ಇದೇ ವ್ಯವಸ್ಥೆಯನ್ನು ಸರಿಯಾಗಿ ಬಳಸಿಕೊಂಡರು. ಗಾಂಧೀಜಿಯವರ ಕನಸಿನ ರಾಷ್ಟ್ರದ ನಿರ್ಮಾಣ ಆಗುವುದರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಪಾತ್ರವನ್ನು ನಾವು ಅಲ್ಲಗಳೆಯುವಂತಿಲ್ಲ!

6. ನಾನು ಧೈರ್ಯ ವಿಶ್ವಾಸಗಳಿಂದ ಪ್ರತಿಯೊಂದು ಹೆಜ್ಜೆ ಇರಿಸುತ್ತೇನೆ: ಅರೆಮನಸ್ಸಿನ ಕಾರ್ಯಗಳು ಯಶಸ್ಸು ಪಡೆಯುವುದಿಲ್ಲ. ಧೈರ್ಯದಿಂದ ವಿಶ್ವಾಸದಿಂದ ಅಡಿಯಿಟ್ಟವರು ಮಾತ್ರ ಗೆಲ್ಲುತ್ತಾರೆ. ನಾವು ಸೋತ ಸಂದರ್ಭಗಳನ್ನು ನೆನಪಿಕೊಂಡಾಗ, ನಾವು ಆ ಸಂದರ್ಭಗಳಲ್ಲಿ ಧೈರ್ಯದಿಂದ ಮುಂದುವರಿಯಲಿಲ್ಲ ಎಂಬ ಸಾಮಾನ್ಯ ಅಂಶವು ಗೋಚರಿಸುತ್ತದೆ. ಧೈರ್ಯವೆಂಬುದು ನಮ್ಮ ಕ್ರಿಯೆಗಳಲ್ಲಿ ವ್ಯಕ್ತವಾದರೆ, ವಿಶ್ವಾಸವೆಂಬುದು ಅಂತರಂಗದ ನಿಧಿ, ವಿಶ್ವಾಸವುಳ್ಳವರ ನಡೆ– ನುಡಿಗಳು ಸಕಾರಾತ್ಮಕವಾಗಿರುತ್ತದೆ. ಇವೆರಡೂ ಒಂದಕ್ಕೊಂದು ಪೂರಕ, ಸಕಲ ಸಾಧನೆಗಳಿಗೂ ಧೈರ್ಯವೇ ಬುನಾದಿ. ಹೇಡಿಗಳು ಜೀವನದಲ್ಲಿ ಅನೇಕ ಬಾರಿ ಸಾಯುತ್ತಾರೆ. ಆದರೆ ವೀರರು ಒಮ್ಮೆ ಮಾತ್ರ ಸಾಯುತ್ತಾರೆ . ಸಾವಿನ ನಂತರವೂ ಜನಮದಲ್ಲಿ ಬದುಕುತ್ತಾರೆ. ಜೀವನದಲ್ಲಿ ಪ್ರತಿ ಹೆಜ್ಜೆಯನ್ನೂ ಧೈರ್ಯ, ವಿಶ್ವಾಸಗಳಿಂದ ಇರಿಸಬೇಕು.




7. ಜೀವನದ ದೊಡ್ಡ ಕನಸನ್ನು ದಿನನಿತ್ಯದ ಸಣ್ಣ ಗುರಿಗಳನ್ನು ತಲುಪುವ ಮೂಲಕ ಈಡೇರಿಸಿಕೊಳ್ಳುತ್ತೇನೆ: ಬಹುತೇಕ ಜನರು ದೊಡ್ಡ ಕನಸುಗಳನ್ನು, ಹೆಗ್ಗುರಿಗಳನ್ನು ಇರಿಸಿಕೊಳ್ಳುತ್ತಾರೆ. ಅವುಗಳ ಸಾಧನೆಗೆ ಶ್ರಮವನ್ನೂ ಪಡುತ್ತಾರೆ. ಆದರೆ ಹೆಚ್ಚಿನ ಜನ ಇವುಗಳನ್ನು ಈಡೇರಿಸಿಕೊಳ್ಳಲು ವಿಫಲರಾಗುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಅವರು ಹೆಗ್ಗುರಿಯ ಹಿರಿತನದಲ್ಲಿ ತಲುಪಬೇಕಾದ ಚಿಕ್ಕ ಗುರಿಗಳನ್ನು ಕಡೆಗಣಿಸುತ್ತಾರೆ. ಮುಖ್ಯ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಬೇಕಾದರೆ ಮೊದಲಿಗೆ ಚಿಕ್ಕ ಪರೀಕ್ಷೆ, ಅರ್ಧವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳು ಬರಬೇಕು. ಯಾರೂ ನೇರವಾಗಿ ದೊಡ್ಡ ಪರೀಕ್ಷೆ ಬರೆದು ರ‍್ಯಾಂಕ್ ಗಳಿಸಲಾರರು. ಗುರಿ ದೊಡ್ಡದಾಗಲಿ, ಕನಸೂ ದೊಡ್ಡದಿರಲಿ– ಇವುಗಳನ್ನು ಚಿಕ್ಕ ಚಿಕ್ಕದಾಗಿ ವಿಭಜಿಸಿಕೊಂಡು ಹಂತ, ಹಂತವಾಗಿ ತಲುಪುತ್ತ ಸಾಗಬೇಕು. ದೊಡ್ಡ ಗಾತ್ರದ ಇಡೀ ರಾಗಿ ಮುದ್ದೆಯನ್ನೂ ನುಂಗಬಹುದು, ಆದರೆ ಅದನ್ನು ತುಂಡು ಮಾಡಿ ನುಂಗಬೇಕು ಅಷ್ಟೆ!

8. ನಾನು ಜೀವನದ ಪ್ರತಿ ಕ್ಷಣವನ್ನೂ ಉತ್ಸಾಹದಿಂದ, ನಂಬಿಕೆಯಿಂದ ಮತ್ತು ಆನಂದದಿಂದ ಬದುಕುತ್ತೇನೆ: ಬದುಕನ್ನು ಒಂದು ದೊಡ್ಡ ಬವಣೆ ಎಂದು ಭಾವಿಸುವವರಿದ್ದಾರೆ. ಎಪ್ಪತ್ತೈದು ಲಕ್ಷ ಗಳಿಸಿದವನಿಗೆ ಇನ್ನೂ ಇಪ್ಪತ್ತೈದು ಗಳಿಸಿ ಕೋಟ್ಯಾಧಿಪತಿ ಆಗುವವರೆಗೆ ನೆಮ್ಮದಿಯಿಲ್ಲ. ಶೇ 96 ಅಂಕ ಗಳಿಸಿದವನಿಗೆ 98 ಗಳಿಸಲಿಲ್ಲ ಎಂಬ ಕೊರಗು. ಹೆಚ್ಚಿನ ಗುರಿ ತಲುಪುವ ಉತ್ಸಾಹ ತಪ್ಪಲ್ಲ. ಆದರೆ ಅದಕ್ಕಾಗಿ ಅಸೂಯೆ, ಆತಂಕ ತಪ್ಪು. ಡಿ.ವಿ.ಜಿ ಯವರ ಜ್ಞಾಪಕ ಚಿತ್ರಶಾಲೆ ಓದಿರುವವರಿಗೆ ಅವರು ಮಾರ್ಕೆಟ್ ಬಳಿಯಲ್ಲಿ ಬೀದಿ ಬದಿಯಲ್ಲಿ ಬದುಕಿನ ವೃದ್ಧ ಭಿಕ್ಷುಕ ದಂಪತಿಗಳ ಪ್ರೇಮ ದಾಂಪತ್ಯದ ಚಿತ್ರಣ ನೀಡಿರುವುದರ ನೆನಪು ಮಾಡಿಕೊಡುತ್ತೇನೆ. ಎಷ್ಟೋ ಶ್ರೀಮಂತ ದಂಪತಿಗಳು ನಿತ್ಯ ಕಚ್ಚಾಡುವುದನ್ನು ನಾವು ಕಾಣುವಾಗ ಈ ಬಿಕ್ಷುಕ ದಂಪತಿಗಳ ನೆನಪಾಗುತ್ತದೆ. ಆನಂದ, ಉತ್ಸಾಹ ಮತ್ತು ನಂಬಿಕೆಗಳ ಜೀವನದ ಅತಿ ದೊಡ್ಡ ಮೌಲ್ಯಗಳು, ಜೀವನದ ಮಿತಿ ದಾಟಲು ಇವು ಅನಿವಾರ್ಯ ಅಂಶಗಳು.

ಮೇಲಿನ ಅಷ್ಟೇ ಸೂತ್ರಗಳನ್ನು ಸರಿಯಾಗಿ ಪಾಲಿಸಿದ್ದೇ ಆದರೆ ಖಂಡಿತ ನಾವು ಜೀವನದ ಪೂರ್ಣತೆಯನ್ನು ಅನುಭವಿಸಬಲ್ಲೆವು. ಲೌಕಿಕ ಗುರಿಯಾದರೂ ಸರಿ ಪಾರಮಾರ್ಥಿಕ ಗುರಿಯಾದರೂ ಸರಿ. ಇಂದಿನ ಜಗತ್ತು ಅವಕಾಶಗಳ ಕಣಜ. ಹಿಂದೆ ಪದವಿ ಪಡೆದವರು

ಪುಟ 6 ಕ್ಕೆ ➢

➢ ಪುಟ 5 ರಿಂದ.....

ಉದ್ಯೋಗಕ್ಕಾಗಿ ಬಹಳ ಪರಿಶ್ರಮ ಪಡಬೇಕಾಗಿತ್ತು. ಏಕೆಂದರೆ ಉದ್ಯಮಗಳು ಇಷ್ಟೊಂದು ಬೆಳೆದಿರಲಿಲ್ಲ. ಆದರೆ ಇಂದು ಪಿ.ಯು.ಸಿ ಪಾಸಾಗಿ ಸಂವಹನ ಕೌಶಲ ಬಲ್ಲವರಾದರೆ ತಿಂಗಳಿಗೆ 15–20 ಸಾವಿರ ಗಳಿಸಲು ಸಾಧ್ಯವಿದೆ. ಹೀಗಾಗಿ ಜೀವನ ದುರ್ಬಲವಲ್ಲ. ಕೇಳದ ಕಾಣದ ಉದ್ಯಮಗಳು ಚಿಗುರೊಡೆಯುತ್ತವೆ. ಇದೂ ಕೂಡ ಮನುಷ್ಯನ ಅದಮ್ಯ ಶಕ್ತಿಗೆ, ಉತ್ಸಾಹಕ್ಕೆ ಸಾಕ್ಷಿಯಲ್ಲವೆ? ಇನ್ನು ಆಧ್ಯಾತ್ಮಿಕ ಕ್ಷೇತ್ರದಲ್ಲೂ ನಮ್ಮ ನಮ್ಮ ಭಾವಕ್ಕೆ ಸೂಕ್ತವಾದ ಗುರುಗಳು ಆಚಾರ್ಯರು ಲಭ್ಯ. ಹಿಂದೆ ಪುರಾಣ ಕಾಲದಲ್ಲಿ ತಪಸ್ಸು ಮಾಡಿ ಸಾಕ್ಷಾತ್ಕಾರ ಪಡೆಯಬೇಕಿತ್ತು. ಆದರೆ ಇಂದು ಮನಸ್ಸು ಮಾಡಿದರೆ ಮುಕ್ತಿ ಗಳಿಸಬಹುದು! ಅಂದು ಘೋರ ಕಾಡು, ರಕ್ಕಸರ ಕಾಟ ಹೀಗೆ ಹಲವು ಸವಾಲು. ಆದರಿಂದು ಶ್ರೀರಾಮಕೃಷ್ಣರೇ ತೋರಿದಂತೆ ನಾಮಜಪದಂತಹ ಸರಳ ಮಾರ್ಗದಲ್ಲಿ ಗುರಿ ತಲುಪಬಹುದು. ಕಲ್ಕತ್ತದಂತಹ ಮಹಾನಗರದಲ್ಲಿ ಯುಗಾವತಾರರ ಲೀಲೆ ನಡೆಯಿತ್ತಲ್ಲವೇ? ಇವೆಲ್ಲ ಸಾಧ್ಯ. ಯಾವಾಗೆಂದರೆ ನಾವು ನಮ್ಮ ಮಿತಿ ದಾಟಿದಾಗ. 'ನಾವು ನಮ್ಮ ಮಿತಿ' ದಾಟುವುದು ದೊಡ್ಡ ಸವಾಲು. ಏಕೆಂದರೆ ಮೊದಲಿಗೆ ನಾವು ನಮ್ಮ ಅಸ್ತಿತ್ವವನ್ನು ಈ ದೇಹಕ್ಕೆ, ಮನಸ್ಸಿಗೆ ಸೀಮಿತ ಮಾಡಿಕೊಂಡಿದ್ದೇವೆ. ಎರಡನೆಯದಾಗಿ ನಮ್ಮ ಬುದ್ಧಿಗಳು 'ವಿದ್ಯೆ' ಯ ಪರಿಣಾಮದಿಂದ ಒಂದು ಚೌಕಟ್ಟಿಗೆ ಸೀಮಿತವಾಗಿವೆ. ಚೌಕಟ್ಟು ಎಷ್ಟೇ ದೊಡ್ಡದಾದರೂ ಕೊನೆಗೆ ಅದು 'ಅಕ್ಕಿ ಬಾಳೆಹಣ್ಣು ಗಂಟುಕಟ್ಟಲು' ಸೀಮಿತ. ಹೀಗೆಂದ ಮಾತ್ರಕ್ಕೆ ವಿದ್ಯೆ ಗಳಿಸುವುದು ಶ್ರೀಮಂತಿಕೆ ಗಳಿಸುವುದು ತಪ್ಪೆಂದು ಭಾವಿಸಬಾರದು. ವಿದ್ಯಾವಂತರಾಗಬೇಕು ಆದರೆ ವಿವೇಕಾನಂದರಂತಹ ವಿದ್ಯಾವಂತ ರಾಗಬೇಕು, ಶ್ರೀಮಂತರಾಗಬೇಕು. – ಮಧುರನಂತೆ, ಬಲರಾಮ ಬಸುವಿನಂತೆ, ರಾಮಚಂದ್ರದತ್ತನಂತೆ ಶ್ರೀಮಂತರಾಗಬೇಕು. ಶ್ರೀರಾಮಕೃಷ್ಣರು ದೇವಿ ದರ್ಶನಕ್ಕೆ ಮಾಡಿದ ಸಾಧನೆಗಳು ಸಾಮಾನ್ಯವಲ್ಲ. ಆದರೂ ದೇವಿದರ್ಶನವಾಗಲಿಲ್ಲ. ಕೊನೆಗೊಂದು ದಿನ ದೇವಿಯ ಬಳಿ ಇರಿಸಿದ್ದ ಖಡ್ಗಕ್ಕೆ ಕೈ ಹಾಕಿದರು. ತಮ್ಮನ್ನು ತಾವು ಬಲಿಗೊಡಲು ತಯಾರಾದರು. ಆಗ ಝಗ್ಗನೆ ಬೆಳಕಾಯಿತು. ದೇವಿ ದರ್ಶನವಿತ್ತಳು. ಮಿತಿ ದಾಟುವುದೆಂದರೆ ಇದು. ಸಾಧನೆಯ ಆಚೆಗೂ ಸಂಕಲ್ಪ ವಿಸ್ತರಿಸಬೇಕು. ಆಗ ನಾವು ಮಿತಿ ದಾಟಿದ್ದೇವೆಂದು ಅರ್ಥ. ಬರೀ ಪ್ರಯತ್ನಗಳಿಂದ ಫಲ ದೊರೆಯುವುದಿಲ್ಲ ಫಲಕ್ಕಾಗಿ ನಾವೇ ಬಲಿಯಾಗಲು ಸಿದ್ಧರಾದಾಗ ಫಲ ಕೈಗೆಟಕುತ್ತದೆ.

ಮಿತಿಯಾಚೆಗಿನ ಮಿಂಚಿನ ಫಲ ಪಡೆಯುವುದರಲ್ಲಿ ಸುಪ್ತ ಮನಸ್ಸಿನ ಪಾತ್ರ ಬಹಳ ಮುಖ್ಯ. ನಿಜ ವಿಷಯವೇನೆಂದರೆ ವ್ಯಕ್ತ ಮನಸ್ಸಿಗಿಂತ ಸುಪ್ತ ಮನಸ್ಸು ಹೆಚ್ಚು ಶಕ್ತ. ವ್ಯಕ್ತ ಮನಸ್ಸು ಆವರಣಗಳೊಳಗೆ ಆವರಣಗಳ ಪ್ರಭಾವದಲ್ಲಿ ಕೆಲಸ ಮಾಡುತ್ತಿರುತ್ತದೆ. ಕೆಲವೊಮ್ಮೆ ನಮ್ಮನ್ನು ಮೆಚ್ಚಿಸಲೆಂದೇ ನಾವು ಮಾತಾಡುವುದನ್ನು ಗಮನಿಸಬಹುದು. ಸಾಮಾನ್ಯ ಸಂಕಲ್ಪಗಳೆಲ್ಲ ಈ ತೆರನ ಮನಸ್ಸಿನ ಹೊರವಲಯದ ತೆರಗಳು. ಈ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುತ್ತೇನೆ'. ಮುಂದಿನ ವರ್ಷಗಳಲ್ಲಿ ನನ್ನ ಸಾಲಗಳನ್ನೆಲ್ಲ ತೀರಿಸಿ ಬಿಡುತ್ತೇನೆ'. ಇನ್ನು ಐದು ವರ್ಷದಲ್ಲಿ ಮನೆಕಟ್ಟುತ್ತೇನೆ ಎಂದೆಲ್ಲ ನಮಗೆ ನಾವೇ ಹೇಳಿಕೊಳ್ಳುತ್ತೇವೆ. ಇವೆಲ್ಲ ಹೇಳಿಕೆಗಳು, ಸಮಾಧಾನದ ಮಾತುಗಳು. ಆದರೆ ಇವೇ ಗುರಿಗಳನ್ನು ಸರ್ವಪ್ರಯತ್ನದಿಂದ ಸುಪ್ತಮನಸ್ಸಿಗೆ ತಳ್ಳಿಬಿಟ್ಟರೆ ಇವುಗಳನ್ನು ಖಂಡಿತ ಸಾಧಿಸಿಬಿಡುತ್ತೇವೆ. ಏಕೆಂದರೆ ಇವು ಈಡೇರುವವರೆಗೆ ನಮ್ಮ ಪ್ರಯತ್ನಗಳನ್ನೆಲ್ಲ ಆ ದಿಕ್ಕಿನತ್ತ ತಿರುಗಿಸಿ ಬಿಡುತ್ತದೆ. ಸುಪ್ತಮನಸ್ಸು ನಮ್ಮ ಗುರಿ ತಲುಪಲು




ನಮಗಿರುವ ಏಕೈಕ ದಾರಿ, ನಮ್ಮ ಮಿತಿಯಾಚೆಗೆ ಗುರಿಯನ್ನು ಸುಪ್ತಮನಸ್ಸಿಗೆ ದೂಡಿಬಿಡುವುದು. ಆಗ ನಮ್ಮ ಎಲ್ಲ ಸಂಪನ್ಮೂಲಗಳು, ದೇಹ–ಮನಸ್ಸು– ಇಂದ್ರಿಯಗಳು ಗುರಿಯ ಸಾಧನೆಯಲ್ಲಿ ತನ್ನಿಂತಾನೇ ನಿರತವಾಗಿ ಬಿಡುತ್ತದೆ. ಎಚ್ಚರಿದ್ದಾಗ ನಮಗೆ ಉಸಿರಾಟದ ಅರಿವಿದೆ ಆದರೆ ಮಲಗಿದ್ದಾಗ? ಉಸಿರಾಡದಿದ್ದರೆ ಸಾವು ಖಚಿತ. ಮಲಗಿದ್ದಾಗಲೂ ಉಸಿರಾಟ ಮುಂದುವರಿಯುತ್ತದೆ, ಸುಪ್ತ ಮನಸ್ಸಿನ ಪ್ರೇರಣೆಯಿಂದ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಅವರಂತಹ ಎಷ್ಟೋ ಜನ ಬಡವಿದ್ಯಾರ್ಥಿಗಳಿದ್ದರು. ಬೀದಿ ದೀಪದ ಕಂಬಗಳೂ ಅನೇಕವಿದ್ದವು. ಆದರೆ ಅವರಿಗೆ ಮಾತ್ರ ಓದಬೇಕು, ವಿದ್ಯಾವಂತನಾಗಬೇಕು, ಅಪ್ರತಿಮ ಬುದ್ಧಿವಂತ ನಾಗಬೇಕು ಎಂಬ ಬಯಕೆ ಮೂಡಿತೇಕೆ? ಏಕೆಂದರೆ ತಾನು ಅಂತಹ ಶ್ರೇಷ್ಠ ವ್ಯಕ್ತಿಯಾಗಬೇಕೆಂಬ ಗುರಿ ಅವರ ಸುಪ್ತ ಮನಸ್ಸಿನಲ್ಲಿತ್ತು. ಆದುದರಿಂದ ಬೆಳಕು ಕಂಡಲ್ಲಿ ಪುಸ್ತಕ ಹಿಡಿದು ಕುಳಿತರು. ಅವರು ಹುಡುಕಿದ್ದು ಬೀದಿ ದೀಪವನ್ನಲ್ಲ, ಬೆಳಕನ್ನು. ಮುಂದೆ ಕರ್ನಾಟಕಕ್ಕೇ ವಿದ್ಯುತ್ ದೀಪದ ಬೆಳಕು ನೀಡಿದ ಮಹಾನುಭಾವ ಅವರು.

ಶ್ರೀರಾಮಕೃಷ್ಣರಲ್ಲಿ ಸುಪ್ತಮನಸ್ಸಿನಲ್ಲಿ ಧ್ಯಾನ, ಸಾಧನೆಗಳು, ಗುರಿ, ಯಾವ ಮಟ್ಟದಲ್ಲಿ ಸ್ಥಾಪಿತವಾಗಿತ್ತು ಎಂಬುದನ್ನು ಸ್ವಾಮಿ ಶಾರದಾನಂದರ ಲೀಲಾ ಪ್ರಸಂಗ ಓದಿ ತಿಳಿಯಬೇಕು. ನಮ್ಮಗಳ ಮನಸ್ಸು ನಡೆದದ್ದಕ್ಕಿಂತ ಎಡೆವಿದ್ದೇ ಜಾಸ್ತಿ. ಗಮನಿಸಿದ್ದಕ್ಕಿಂತ ಜಾರಿದ್ದೇ ಜಾಸ್ತಿ! ರಾಮಕೃಷ್ಣರ ಮನಸ್ಸು ಗುರಿ ಎಷ್ಟು ಎತ್ತರ ಎಂದು ಊಹಿಸುವುದೂ ಕಷ್ಟವೇ. ಅವರು ಅವತಾರ ಪುರುಷ ಎಂದು ಸಿದ್ಧರಾಗುವ ಮೊದಲೇ, ಬಾಲ್ಯದಲ್ಲೇ ಬೆಳ್ಳಕ್ಕಿ ಹಿಂಡು ಕಂಡು ಸಮಾಧಿಸ್ಥವಾಗಿದ್ದ ಶುದ್ಧ ಮನಸ್ಸು ಅದು. ನರೇಂದ್ರ ಇನ್ನೂ ವಿವೇಕಾನಂದ ಆಗಿಲ್ಲ. ಅತ್ತ ಐರೋಪ್ಯ ಚಿಂತನೆಯ ಪ್ರಖರತೆ, ಇತ್ತ ಶ್ರೀರಾಮಕೃಷ್ಣರ ಅನನ್ಯ ಸಾಧನೆಯ ಸಾಕ್ಷರತೆಯ ನಡುವೆ ಗೊಂದಲದ ಮುದ್ದೆಯಾಗಿದ್ದಾನೆ. ಇವನನ್ನು ಕಾಣುತ್ತಲೇ,ಇವನ ಪೌರುಷವನ್ನು ಭಾವಮುಖದಲ್ಲಿ ಕಂಡು 'ನ....' ಎಂದು ಸಮಾಧಿಸ್ಥರಾಗಿ ಬಿಡುವ ಶ್ರೀರಾಮಕೃಷ್ಣರ ಮನಸ್ಸು ಎಂತಹದ್ದಿರಬೇಕು? ಕಾಮ– ಕಾಂಚನ ತ್ಯಾಗ– ನಾವೂ ಮಾತಾಡುತ್ತೇವೆ. ಮರುದಿನ ಮುಂಜಾನೆ ಬ್ಯಾಂಕ್ ಬ್ಯಾಲೆನ್ಸ್ ಎಷ್ಟಿದೆ ಎಂದು ನೋಡುತ್ತೇವೆ. ಶ್ರೀರಾಮಕೃಷ್ಣರ ಸುಪ್ತ ಮನಸ್ಸಿನಲ್ಲಿ ಇವುಗಳು ಎಷ್ಟು ವರ್ಜಿತವಾಗಿತ್ತು ಎಂದು ದಾಖಲಾಗಿದೆ. ನಾಣ್ಯವಿರಲಿ, ಯಾವುದೇ ಲೋಹ ತಗುಲಿದರೂ ವಿದ್ಯುತ್ ಶಾಕ್ ಬಡಿದಂತಾಗುತ್ತಿತ್ತು ಅವರಿಗೆ. ಸಾಮಾನ್ಯ ಮನಸ್ಸಿನ ಮಿತಿ ಮೀರಿದ್ದವರು

ಪುಟ 14 ಕ್ಕೆ ➢

ಭೂರಮೆ

# ಅಪೂರ್ವ ಸಹೋದರಿಯರು

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

**"ನಾ**ವು ಒಬ್ಬರಿಗೆ ಕೈನೀಡಿ ಕೊಡಬೇಕಲ್ಲದೆ ನಮಗಾಗಿ ಎಂದೂ ಕೈ ಚಾಚಬಾರದು. ಸಂಪಾದಿಸುವುದು ನಿಮ್ಮದಲ್ಲ, ಭಗವಂತನದು, ನಾಲ್ಕು ಜನಕ್ಕೆ ಕೊಡಬೇಕಾದುದು. ನೀವು ಟ್ರಜರಿ ಆಫೀಸಿನಂತೆ. ಹತ್ತು ಜನಕ್ಕೆ ನಿಮ್ಮ ಹಣ ವಿನಿಯೋಗವಾಗಬೇಕು." ಎನ್ನುತ್ತಿದ್ದ ತಾಯಿಯ ಮಾತುಗಳನ್ನು ತಮ್ಮ ಜೀವನದಲ್ಲಿ ಶ್ರದ್ಧೆಯಿಂದ ಪಾಲಿಸಿದವರು ಮಂಗಳಾಂಬ, ಲಲಿತಾಂಬ ಎಂಬ ಸೋದರಿಯರು. ಜೀವನ ಮೌಲ್ಯಗಳನ್ನೇ ಬದುಕಿನಲ್ಲಿ ಗುರುತಿಸಿಕೊಳ್ಳದೆ, ತಂದೆ ತಾಯಿಗಳೊಂದಿಗೆ ಕೂಡ ವ್ಯಾವಹಾರಿಕವಾಗಿ ನಡೆದುಕೊಳ್ಳುವ ಹಲವು ಪ್ರಸಂಗಗಳು ಕಣ್ಣೆದುರಿಗಿರುವಾಗ, ತಂದೆ ತಾಯಿಗಳ ಸ್ಮರಣಾರ್ಥ ಹತ್ತಾರು ಸತ್ಕಾರ್ಯಗಳನ್ನು ಹಲವು ಆದರ್ಶಗಳ ಸಹಿತ ನಡೆಸಿಕೊಂಡು ಬಂದ ಅಪೂರ್ವ ಸೋದರಿಯರು. ಇವರಲ್ಲಿ ಮಂಗಳಾಂಬ ಈಗಿಲ್ಲ. ಲಲಿತಾಂಬನವರಿಗೆ ಈಗ ಎಂಬತ್ಮೂರರ ಪ್ರಾಯ.

ಈ ಸೋದರಿಯರ ಬದುಕು ಸಾಮಾನ್ಯರಿಗಿಂತ ಸಂಪೂರ್ಣ ಭಿನ್ನ. ಕಿತ್ತೂರು ಗ್ರಾಮದ ಕೆ.ವಿ ವೆಂಕಟನಾರಾಯಣ ಮತ್ತು ಸೀತಾಲಕ್ಷ್ಮಮ್ಮ ದಂಪತಿಗಳು ಈ ಮಕ್ಕಳನ್ನು ಬೆಳೆಸಿದ ರೀತಿಯೇ ವಿಭಿನ್ನ. ಇಬ್ಬರೂ ಸೋದರಿಯರು ನಡೆದುಬಂದ ದಾರಿ ಎಲ್ಲರೂ ತುಳಿದ ದಾರಿಯಲ್ಲ. ಇದಕ್ಕೆ ಕಾರಣ ಬಾಲ್ಯದಲ್ಲಿ ದೊರೆತ ತಾಯಿಯ ಬೋಧನೆ, ಶಿಕ್ಷಣ. ಉತ್ತಮ ಶಿಕ್ಷಣ ಪಡೆದು ತಕ್ಕ ಉದ್ಯೋಗವನ್ನು ಗಳಿಸಿದ ಸೋದರಿಯರು ಬದುಕನ್ನು ಕಂಡು ಅರ್ಥೈಸಿದ ರೀತಿಯೇ ವಿಶಿಷ್ಟವಾದುದು.

ಹಿರಿಯರಾದ ಮಂಗಳಾಂಬ ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನಂತರ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದ್ದರೆ, ತಂಗಿ ಲಲಿತಾಂಬ ಸಿ.ಬಿ.ಜೆಡ್ ಪದವಿಯೊಂದಿಗೆ ಮಕ್ಕಳ ಅಭಿವೃದ್ಧಿ ಕಛೇರಿಯಲ್ಲಿ ಅಧಿಕಾರಿಯಾಗಿದ್ದರು. ಅರಣ್ಯ ಇಲಾಖೆಯಲ್ಲಿ ವೃತ್ತಿಯಲ್ಲಿದ್ದ ತಂದೆ ಶಿಸ್ತಿನ ಸ್ವಭಾವ, ಹೆಚ್ಚಿನ ಶಿಕ್ಷಣವಿಲ್ಲದಿದ್ದರೂ ವಿಚಾರಶೀಲೆಯಾಗಿದ್ದ ತಾಯಿಯ ಆದರ್ಶ, ಜೊತೆಗೆ ದೈವಭಕ್ತರಾಗಿದ್ದ ತಾತ, ಮನೆಯ ಸಾಂಪ್ರದಾಯಿಕ, ಧಾರ್ಮಿಕ ಆದರೆ ಮೂಢ ನಂಬಿಕೆಗಳನ್ನು ಬೆಂಬಲಿಸದ ಪರಿಸರ, ಎಲ್ಲವೂ ಸೋದರಿಯರನ್ನು ಬೆಳೆಸುವಲ್ಲಿ ತಮ್ಮದೇ ಕೊಡುಗೆಗಳನ್ನು ನೀಡಿದ್ದವು. ವಿದ್ಯೆಗೇ ಹೆಚ್ಚಿನ ಪ್ರಾಶಸ್ತ್ಯ ನೀಡುವ ಹಿರಿಯರ ಮಾರ್ಗದರ್ಶನದಿಂದಾಗಿ ಬಡತನದಲ್ಲಿಯೂ ಉತ್ತಮ ಶಿಕ್ಷಣ ಪಡೆಯಲು ಸಾಧ್ಯವಾಗಿತ್ತು.

ಬಾಲ್ಯ ಕಳೆದು ಯೌವ್ವನಕ್ಕೆ ಕಾಲಿಟ್ಟಾಗಲೂ ಅಕ್ಕ, ತಂಗಿಯರಿಗೆ ವಯೋಸಹಜವಾದ ಸಣ್ಣಪುಟ್ಟ ಆಕಾಂಕ್ಷೆಗಳೂ ಅದೇಕೋ ಕಾಡಲೇ ಇಲ್ಲ. ಮನೆ, ಕಾಲೇಜು, ಶಿಕ್ಷಣ, ನಂತರ ವೃತ್ತಿಯಲ್ಲಿ ತತ್ಪರತೆ ಹೀಗೆ ಒಂದೇ ದಿಕ್ಕಿನಲ್ಲಿ ಯೋಚನಾಧಾರೆ ಹರಿದಿತ್ತು. ಪ್ರೀತಿ, ಪ್ರೇಮ, ವಿವಾಹದತ್ತ ಅವರ ಗಮನ ಹರಿಯಲೇ ಇಲ್ಲ. ಮಧ್ಯಮ ವರ್ಗದ ಕುಟುಂಬವಾಗಿದ್ದುದರಿಂದ ಸೋದರಿಯರ ಸಂಪಾದನೆಯಲ್ಲಿ ಎಲ್ಲವೂ ಸ್ವಯಾರ್ಜಿತವೇ ಆಗಿತ್ತು. 'ಮದುವೆ' ಎಂಬುದರಲ್ಲಿ ಆಸಕ್ತಿಯೇ ಇಲ್ಲವೆಂದು ತಾಯಿ ತಂದೆಗಳ ಬಲವಂತವೂ ಇರದೆ ಅವರ ವಿಭಿನ್ನ ಬದುಕಿಗೆ ಯಾವ ಅಡಚಣೆಯೂ ಎದುರಾಗಲಿಲ್ಲ. 'ದುಡ್ಡಿದೆ ಒಂದು ಒಳ್ಳೆಯ ಕೆಲಸ ಮಾಡಿ' ಎಂಬುದು ಮಾತ್ರ ತಾಯಿಯ ಹಿತವಚನವಾಗಿರುತ್ತಿತ್ತು. ಅದಕ್ಕೇ ತಂದೆಯ ಅನುಮೋದನೆಯೂ ಇತ್ತು. ಲಕ್ಷಣವಾಗಿಯೂ ಇದ್ದ ಸೋದರಿಯರು ಗುಣ ಸಂಪತ್ತನ್ನೂ ಹೊಂದಿ ಸಮಾಜಮುಖಿಯಾಗಿಯೇ ತಮ್ಮ ಬದುಕನ್ನು ಮೀಸಲಿಡಲು ನಿರ್ಧರಿಸಿದ್ದರು.

ಬಾಲ್ಯದಿಂದಲೂ ಬೆಳೆದು ಬಂದಿದ್ದ ವಾತಾವರಣ ಸೋದರಿಯರಲ್ಲಿ ಬಲವಾದ ಆತ್ಮವಿಶ್ವಾಸವನ್ನು ತುಂಬುವುದರಲ್ಲಿ ಫಲಕಾರಿಯಾಗಿತ್ತು. ಸರ್ಕಾರಿ ಕೆಲಸದ ಕಾರಣವಾಗಿ ಅನೇಕ ಸಲ ಒಂಟಿಯಾಗಿರಬೇಕಾದ ಸ್ಥಳಗಳಲ್ಲಾಗಲೀ ಪ್ರಯಾಣದ ಸಂದರ್ಭದಲ್ಲಿನ ಅಡಚಣೆಗಳಲ್ಲಾಗಲೀ ಎಲ್ಲಿಯೂ ಯಾವ ಅಳುಕಿಲ್ಲದೆ ಪರಿಸ್ಥಿತಿಯನ್ನೆದುರಿಸುವ ದಿಟ್ಟತನ ಸ್ವಭಾವದಲ್ಲಿ ಬೆಳೆದುಬಂದಿತ್ತು. ಮನಸ್ಸಿನ ಗೊಂದಲಕ್ಕೆ ಯಾವ ಪರಿಸರದಲ್ಲಿಯೂ ಸರಳ ಜೀವನದ ತತ್ತ್ವವನ್ನು ಪಾಲಿಸುತ್ತಾ ಬಂದ ಸೋದರಿಯರು ತಮ್ಮ ಸಂಪಾದನೆಯ ವಿನಿಯೋಗಕ್ಕೆ ಕಂಡುಕೊಂಡ ದಾರಿಗಳು ಒಂದೆರೆಡಲ್ಲ. ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ, ಸಾಹಿತ್ಯಿಕ ಚಟುವಟಿಕೆಗಳಲ್ಲಿ ತಮ್ಮ ಧಾರಾಳ ಕೊಡುಗೆಗಳನ್ನು ನೀಡುತ್ತಾ ಬಂದಿರುವುದಕ್ಕೆ ಹಲವು ನಿದರ್ಶನಗಳುಂಟು. ಕೆಲವು ಬಡಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಗೆ, ಮತ್ತೆ ಕೆಲವು ಬಡಕುಟುಂಬಗಳಿಗೆ ತಿಂಗಳಿಗೊಮ್ಮೆ ಸಂಬಳದ ಬಟವಾಡೆ, ರಾಗಿಗುಡ್ಡದ ಪ್ರವಚನ ಮಂದಿರದ ಕೊಠಡಿ, ಅಲ್ಲಿನ ಗ್ರಂಥಾಲಯದ ಕಟ್ಟಡಕ್ಕೆ ಸಹಾಯನಿಧಿ, ರಮಣ ಮಹರ್ಷಿ ಶಾಲೆಯಲ್ಲಿ ಕಟ್ಟಿಸಿದ 1 ಕೋಣೆ, ಡೆಕ್ಕನ್ ಹೆರಾಲ್ಡ್ ಕಚೇರಿ ಸಮೀಪದ ವೃದ್ಧಾಶ್ರಮಕ್ಕೆ ಕಟ್ಟಡದ ನೆರವು, ಬೆಂಗಳೂರಿನ ಜಯನಗರ 9ನೇ ಬಡಾವಣೆಯ ರಾಮಮಂದಿರದ ಪ್ರವಚನ ಮಂದಿರ, ಮೈಸೂರಿನಲ್ಲಿರುವ ಪಿಂಜರಾ ಪೋಲ್ ಸಂಸ್ಥೆಯಲ್ಲಿರುವ ಗೋಶಾಲೆಯ ಹಜಾರ, ಹೊಳೆನರಸೀಪುರದಲ್ಲಿ 1 ಅತಿಥಿಗೃಹ, ಮೈಸೂರು ರಸ್ತೆಯಲ್ಲಿ ಕೊಳವೆ ಬಾವಿ, ಗುಲ್ಬರ್ಗದ ಶಿಶುಗೃಹಕ್ಕೆ ಕೊಠಡಿ, ಹೆಬ್ಬೂರಿನ ಕಲ್ಯಾಣಮಂಟಪ, ಅಲ್ಲಿನ ಗೋಶಾಲೆಯ ಬಾವಿ ಹೀಗೆ ಇವರ ಸಹಾಯಹಸ್ತ ತಲುಪಿರುವ ಕ್ಷೇತ್ರಗಳು ವೈವಿಧ್ಯಮಯ. ಕೈನೀಡಿ ಬಂದವರು ಇವರ ಬಳಿಯಿಂದ ಬರಿಗೈಯಲ್ಲಿ ಹಿಂತಿರುಗಿದ ಮಾತೇ ಇಲ್ಲ. ಪುಸ್ತಕ ಪ್ರಕಟಣೆಗೆ ಕೂಡ ಇವರ ನೆರವಿನ ಹಸ್ತ ಚಾಚಿಕೊಂಡಿದೆ. 'ಶ್ರೀ ಶಂಕರ ಭಗವತ್ಪಾದ ವಿರಚಿತ 'ಶ್ರೀ ಶಿವಾನಂದಲಹರೀ', ಶ್ರೀಮನ್ಮಹಾಭಾರತ ಕಾವ್ಯ ಮುಂತಾದ ಅನೇಕ ಆಧ್ಯಾತ್ಮ ಗ್ರಂಥಗಳಿಗೆ ನೆರವು ನೀಡಿದ್ದಾರೆ.

ಸರಳ ಜೀವನ, ಪ್ರಚಾರಕ್ಕೆ ವಿಮುಖ, ಧಾರ್ಮಿಕ ಸಮಾರಂಭಗಳಲ್ಲಿ ಇವೆಲ್ಲ ನಿವೃತ್ತಿಯ ನಂತರದಲ್ಲಿ ರೂಢಿಸಿಕೊಂಡ ಅಭ್ಯಾಸಗಳು. 1998ರಲ್ಲಿ ಮಂಗಳಾಂಬ ತೀರಿಕೊಂಡು ಲಲಿತಾಂಬ ಈಗ ತಮ್ಮ 83ರ ಪ್ರಾಯದಲ್ಲಿದ್ದಾರೆ. ಇತ್ತೀಚಿನ ಕೆಲವು ವರ್ಷಗಳವರೆಗೂ ಅವರ ದಿನಚರಿ (ವಯೋಸಹಜವಾಗಿ ಈಗ ಸಾಧ್ಯವಿಲ್ಲ) ಬೆಳಗ್ಗೆ ನಾಲ್ಕಕ್ಕೆ ಪ್ರಾರಂಭವಾಗುತ್ತಿತ್ತು. ಮನೆಯಲ್ಲಿ ಬೆಳೆಸಿದ ಹೂವು, ವೀಳ್ಯದೆಲೆಗಳನ್ನು ಚೀಲವೊಂದರಲ್ಲಿಟ್ಟುಕೊಂಡು ತಮ್ಮ ಮನೆಯ ರಸ್ತೆಯ ಎಲ್ಲರ ಮನೆ ಕಾಂಪೌಂಡ್ ಮೇಲೆ ಸ್ವಲ್ಪ ಸ್ವಲ್ಪ ಇಟ್ಟು ಬರುತ್ತಿದ್ದುದು ಇವರ ನಿತ್ಯದ ಕ್ರಮವಾಗಿರುತ್ತಿತ್ತು. ನಿರಾಡಂಬರ ಜೀವನದಲ್ಲಿ ಇವರು ನಿತ್ಯದ ಅಡುಗೆಗೆ ಬಳಸುತ್ತಿದ್ದುದು ಬೆರಣಿ, ಸೌದೆಯಂತಹ ಇಂಧನಗಳನ್ನೇ. ಒಂಟಿತನದ ಭಾವ ಇವರನ್ನೆಂದೂ ಕಾಡಿಲ್ಲವಂತೆ. "ಮನೆ ತುಂಬ ದೇವರ ಪಟಗಳು, ಮನದ ತುಂಬ ಸುವಿಚಾರಗಳು. ಒಂಟಿತನವೆಲ್ಲಿಯದು? ಇದವರ ಪ್ರಶ್ನೆ. ಇಂಥವರ ಬದುಕಿನ ಹಾದಿ ನಮಗೆ ಪಥದರ್ಶಕ ವಾಗಬಹುದಲ್ಲವೇ? ●

**ಸ್ವಾಭಿಮಾನ, ಆತ್ಮವಿಶ್ವಾಸಗಳು ನಮ್ಮಲ್ಲಿ ಚೈತನ್ಯ ಮತ್ತು ಪ್ರೀತಿಯನ್ನು ಉದ್ದೀಪನಗೊಳಿಸುತ್ತದೆ.**

# ಶಿಕ್ಷಕರೇ ನಿಮ್ಮ ಪ್ರತಿನಿಧಿ ಹೇಗಿರಬೇಕು?

**ಚಿದಾನಂದ ಆ. ಪಾಟೀಲ**
**ಶಿಕ್ಷಣ ಸಂಯೋಜಕರು, ಕನಕಪುರ**
**ರಾಜ್ಯ ಪ್ರಧಾನ ಕಾರ್ಯದರ್ಶಿ,**
**ಕ.ರಾ.ಮಾ.ಶಿ.ಸಂ.**



**ಕ**ರ್ನಾಟಕ ರಾಜ್ಯ ಈಗ ತಾನೆ ವಿಧಾನಸಭೆಯ ಚುನಾವಣೆಯಿಂದ ಹೊರಬಂದು ನಿಂತಿರುವ ಸಂದರ್ಭದಲ್ಲಿ ಈ ನಾಡಿನ ಪ್ರಜ್ಞಾವಂತ ಮತದಾರರೆಂದು ಕರೆಯಲ್ಪಡುವ ಶಿಕ್ಷಕರು ಮಾತ್ರ ಶಿಕ್ಷಣ ಹಾಗೂ ಪದವೀಧರ ಕ್ಷೇತ್ರಗಳಿಗೆ ಜೂನ್ 08, 2018ರಂದು ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡಲು ಹೊಸಲಿನಲ್ಲಿ ಬಂದು ನಿಂತಿದ್ದಾರೆ. ಸಾರ್ವತ್ರಿಕ ಚುನಾವಣೆಗೂ ಈ ವಿಧಾನ ಪರಿಷತ್ ಅದರಲ್ಲೂ ಶಿಕ್ಷಕರ ಮತ್ತು ಪದವೀಧರ ಪ್ರತಿನಿಧಿಗಳ ಆಯ್ಕೆಯನ್ನು ಬಹಳ ಪ್ರಜ್ಞಾಪೂರ್ವಕವಾಗಿ ಮಾಡಬೇಕಾಗುತ್ತದೆ. ಕರ್ನಾಟಕದ ವಿಧಾನ ಪರಿಷತ್ತಿಗೆ ವಿಶಿಷ್ಟ ಇತಿಹಾಸವಿದೆ. ನಾಡಿನ ಅನೇಕ ಚಿಂತಕರು, ಬುದ್ಧಿಜೀವಿಗಳೂ, ಸಮಾಜದ ನಾನಾ ಕ್ಷೇತ್ರಗಳಿಗೆ ತಮ್ಮದೇ ಆದ ಸೇವೆ ಸಲ್ಲಿಸಿದವರು ಅಲ್ಲಿ ಸೇವೆ ಸಲ್ಲಿಸಿದ್ದಾರೆ. ಇಂತಹ ಪ್ರಾತಿನಿಧ್ಯವಿರುವ ಸ್ಥಳಕ್ಕೆ ಶಿಕ್ಷಕರು ನಾವು ಯಾವ ತರಹದ ವ್ಯಕ್ತಿಗಳನ್ನು ಆಯ್ಕೆಮಾಡಬೇಕೆಂಬ ಜವಾಬ್ದಾರಿ ನಮ್ಮ ಮೇಲಿದೆ.

ಶಿಕ್ಷಕ ಕ್ಷೇತ್ರ ಈಗ ಅನೇಕ ಬದಲಾವಣೆಗೆ ಮತ್ತು ಪ್ರಯೋಗಗಳಿಗೆ ಒಳಗಾಗಿ ಇಂದು ಪರಿವರ್ತನೆಯ ಹಂತದ ಸಂಕ್ರಮಣ ಕಾಲದಲ್ಲಿದೆ. ಇಂದು ಹಳೆಯ ಮತ್ತು ಹೊಸ ಸಮಸ್ಯೆಗಳು ಶಿಕ್ಷಣ ಕ್ಷೇತ್ರ ಮತ್ತು ಶಿಕ್ಷಕರ ಮಧ್ಯದಲ್ಲಿ ಇವೆ.

- ಇಂದು ದೇಶದಲ್ಲಿ ಹೊಸ ಶಿಕ್ಷಣ ನೀತಿ ರೂಪುಗೊಳ್ಳುತ್ತಿದೆ.
- ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ತಮ್ಮದೇ ಆದ ಸಮಸ್ಯೆಗಳಿವೆ.
- ವಿದೇಶಿ ವಿಶ್ವವಿದ್ಯಾಲಯಗಳು ಶಿಕ್ಷಣ ಪದ್ದತಿಯ ಅಡಿಗಲ್ಲನ್ನೇ ಅಲುಗಾಡಿಸುತ್ತಿವೆ.
- ಉದ್ಯೋಗ ಅವಲಂಬಿತ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣದ ಮಧ್ಯೆ ಕಂದಕ ನಿರ್ಮಾಣವಾಗಿದೆ.
- ದೇಶಕ್ಕೆ ಮಾರಕವಾಗುವಂತಹ ಪಠ್ಯಕ್ರಮ ಶಿಕ್ಷಣ ವ್ಯವಸ್ಥೆಯಲ್ಲಿ ಸೇರಿಕೊಂಡಿದೆ.
- ರಾಜಕೀಯ ವ್ಯವಸ್ಥೆಯ ವಿಚಾರಧಾರೆಗಳು ವಿಶ್ವವಿದ್ಯಾಲಯ ಗಳಲ್ಲಿ ನುಸುಳಿ ರಾಷ್ಟ್ರೀಯತೆಗೆ ಕುಂದುತರುತ್ತಿವೆ.

ಹೀಗೆ ಶಿಕ್ಷಣಕ್ಷೇತ್ರವು ಬಗೆಬಗೆಯ ಸಮಸ್ಯೆಗಳ ಮಧ್ಯೆ ಬಳಲಿ ಬೆಂಡಾಗುತ್ತಿದೆ. ಅರಾಷ್ಟ್ರೀಯ ವಿಚಾರಧಾರೆಗಳು ತಾತ್ಕಾಲಿಕ ಮೇಲುಗೈ ಸಾಧಿಸುತ್ತಿರುವ ಈ ಸಂದರ್ಭದಲ್ಲಿ ಪ್ರಜ್ಞಾವಂತ ಮತದಾರ ಶಿಕ್ಷಕರಾದ ನಾವು ನಮ್ಮ ಪ್ರತಿನಿಧಿ ಹೇಗಿರಬೇಕು? ಎಂದು ಚಿಂತಿಸಲು ಇದು ಸರಿಸಮಯವಾಗಿದೆ.

ಇನ್ನು ಶಿಕ್ಷಕರು ಅನೇಕ ವರ್ಷಗಳಿಂದ ಸಮಸ್ಯೆಗಳ ನಡುವೆ ನರಳಿ ಬೆಂಡಾಗಿದ್ದಾರೆ.

- ಕಾಲ್ಪನಿಕ ವೇತನ ಬಡ್ತಿ ಎನ್ನುವುದು ಶಿಕ್ಷಕರನ್ನು ಹಿಂಸಿಸುತ್ತಿರುವ ವಿಶಿಷ್ಟ ವಿಷಯವಾಗಿದೆ.
- ದೇಶದ ಎಲ್ಲೆಡೆ ಒಂದೇ ಶಿಕ್ಷಣ ಪದ್ಧತಿ ಬರುತ್ತಿರುವ ಈ ದಿನಗಳಲ್ಲಿ ದೇಶದ ಎಲ್ಲೆಡೆ ಒಂದೇ ವೇತನ ಪದ್ದತಿ ಬರಬೇಕು ಎನ್ನುವ ಶಿಕ್ಷಕರ ವಾದಕ್ಕೆ ಅರ್ಥವಿದೆ.
- ಎಲ್ಲ ನೌಕರರಿಗೆ ಕಾಡುವ ಎನ್.ಪಿ.ಎಸ್ ಭೂತವು ಶಿಕ್ಷಕರನ್ನು ಆವರಿಸಿದೆ.
- ಇಲಾಖೆಯಲ್ಲಿ ಬಡ್ತಿ ಸಮಸ್ಯೆಗೆ ಅಂತ್ಯ ಕಾಣುತ್ತಿಲ್ಲ.
- ಉನ್ನತ ಶಿಕ್ಷಣದಲ್ಲಿರುವ ಉಪನ್ಯಾಸಕರಿಗೆ, ದೇಶದಲ್ಲಿ ಜಾರಿಯಲ್ಲಿರುವ ಅನೇಕ ಸವಲತ್ತುಗಳು ಕರ್ನಾಟಕದಲ್ಲಿ ಇಂದು ಮರೀಚಿಕೆಯಾಗಿವೆ.
- ಸರ್ಕಾರಿ, ಅನುದಾನಿತ, ಅನುದಾನ ರಹಿತ ಎಂದು ಶಿಕ್ಷಕರನ್ನು ವರ್ಗಾಯಿಸಿ ಶಿಕ್ಷಕರ ಮಧ್ಯದಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಗೋಡೆ ನಿರ್ಮಿಸಿದೆ.

## ಆತ್ಮೀಯ ಶಿಕ್ಷಕ ಮಿತ್ರರೇ,

ರಾಜಕೀಯ ಪಕ್ಷಾತೀತವಾಗಿ ನಡೆಯುವ ಈ ವಿಧಾನ ಪರಿಷತ್ ಚುನಾವಣೆಯಲ್ಲಿ ಶಿಕ್ಷಣ ವ್ಯವಸ್ಥೆಗೆ ಪೂರಕವಾಗಬಲ್ಲ ದೇಶದ ಸಂಸ್ಕೃತಿ, ಪರಂಪರೆಯನ್ನು ಎತ್ತಿಹಿಡಿಯಬಲ್ಲ ಸಾಮಾಜಿಕ ಕಳಕಳಿ ಇರುವ ಮತ್ತು ಶಿಕ್ಷಣ ಮತ್ತು ಶಿಕ್ಷಕರ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸುವ ವ್ಯಕ್ತಿಯನ್ನು ಆಯ್ಕೆಮಾಡುವ ಹೊಣೆಗಾರಿಕೆ ನಮ್ಮ ಮೇಲಿದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಕಳೆದ 50 ವರ್ಷಗಳಿಂದ ನಾಡಿನ ಶಿಕ್ಷಣ ವ್ಯವಸ್ಥೆಯ ಭಾಗವಾಗಿ ಕಾರ್ಯಮಾಡುತ್ತ ಬಂದಿದ್ದು, ಮಾಧ್ಯಮಿಕ ಶಿಕ್ಷಕ ಸಂಘದ ಸಂಸ್ಥಾಪಕರಲ್ಲಿ ಒಬ್ಬರಾದ ಶ್ರೀ ಕೃ. ನರಹರಿಯವರು ವಿಧಾನ ಪರಿಷತ್ತಿನಲ್ಲಿ ಶಿಕ್ಷಣದ ಬಗ್ಗೆ ವ್ಯಕ್ತ ಪಡಿಸಿದ ಕಾಳಜಿ ಇಂದು ದಾಖಲರ್ಹವಾಗಿದೆ. ಇಂದು ಅನೇಕರು ಅದೇ ನಿಟ್ಟಿನಲ್ಲಿ ಕಾರ್ಯಮಾಡುತ್ತಿದ್ದಾರೆ. ಶಿಕ್ಷಕ ಸಮುದಾಯಕ್ಕೆ ಗೌರವ ತರುವ ವ್ಯಕ್ತಿಯನ್ನು ಆಯ್ಕೆ ಮಾಡುವಲ್ಲಿ ನಾವೆಲ್ಲರು ಶ್ರಮಿಸೋಣ. ಮಂಗಳೂರು, ತುಮಕೂರು ಮತ್ತು ಮೈಸೂರು ವಿಭಾಗದಲ್ಲಿ ಶಿಕ್ಷಕ ಚುನಾವಣೆ ನಡೆಯುತ್ತಿದ್ದು ಅದರಂತೆ ಕಲಬುರಗಿ, ಮಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಪದವೀಧರ ಚುನಾವಣೆ ನಡೆಯುತ್ತಿದ್ದು ಈ ಎರಡು ಚುನಾವಣೆಯಲ್ಲಿ ಶಿಕ್ಷಕರು ಮತದಾರರಾಗಿದ್ದು ಎಲ್ಲ ಶಿಕ್ಷಕ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮತದಾನ ಮಾಡಬೇಕು ಮತ್ತು ದೇಶದ, ನಾಡಿನ ಸಂಸ್ಕೃತಿಯನ್ನು ಎತ್ತಿಹಿಡಿಯಬಲ್ಲ, ನಾಡಿನ ಪರಂಪರೆಯನ್ನು ರಕ್ಷಿಸಬಲ್ಲ, ಶಿಕ್ಷಕರನ್ನು ಮತ್ತು ಶಿಕ್ಷಣ ವ್ಯವಸ್ಥೆಗೆ ಪೂರಕವಾದ ವ್ಯಕ್ತಿಯನ್ನು ಆಯ್ಕೆಮಾಡಿರಿ. ವಿಧಾನ ಪರಿಷತ್ ಚುನಾವಣೆಗೆ ನಮ್ಮೆಲ್ಲರ ಮತವಿರಲಿ. ಮತದಾನ ಶಿಕ್ಷಕರಿಗೆ ಮಾತ್ರ ನೀಡಿರುವ ಹಕ್ಕು, ಹೀಗಾಗಿ ಮತದಾನ ಮಾಡುವುದು ನಮ್ಮ ಕರ್ತವ್ಯವೂ ಆಗುತ್ತದೆ. ನಮ್ಮ ಕರ್ತವ್ಯದಿಂದ ವಿಮುಖರಾಗದೆ, ಯಾವ ಬಗೆಯ ಆಸೆ ಆಮಿಷಗಳಿಗೆ ಒಳಗಾಗದೆ ಸಮಾಜ ಗೌರವಿಸುವಂತಹ ಪ್ರತಿನಿಧಿಯನ್ನು ಆರಿಸೋಣ.

●




# ವಿಶ್ವ ಪರಿಸರ ದಿನ

**ಈ ವರ್ಷ ಭಾರತ ಜೂನ್ 5 ರಂದು ನಡೆಯಲಿರುವ 'ವಿಶ್ವ ಪರಿಸರ ದಿನ'ದ ಅತಿಥೇಯ ರಾಷ್ಟ್ರವಾಗಿ ಭಾರತ ಜವಾಬ್ದಾರಿಯನ್ನು ಸ್ವೀಕರಿಸಿದೆ ತನ್ನಿಮಿತ್ತ ಈ ವಿಶೇಷ ಲೇಖನ.**

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



**ಸ**ಹಸ್ರಾರು ವರ್ಷಗಳಿಂದ ಭಾರತ ತನ್ನ ಸುತ್ತ ಮುತ್ತಲಿನ ಪ್ರಕೃತಿಯನ್ನು ಪೂಜಿಸಿಕೊಂಡು ಬರುತ್ತಿದೆ. ನಮ್ಮ ಪೂರ್ವಜರು ನಮ್ಮೆಲ್ಲ ನದಿಗಳನ್ನು ತಾಯಿ ಎಂದು ಕರೆದರು. ನದಿಯ ನೀರನ್ನು ಕಲುಷಿತಗೊಳಿಸಬಾರದು, ನದಿಯಲ್ಲಿ ಯಾವರೀತಿ ಸ್ನಾನ ಮಾಡಬೇಕು ಹೀಗೆ ಹತ್ತು ಹಲವು ನಿಯಮಗಳನ್ನು ಹಾಕಿದ್ದರು. ಪ್ರಾಣಿ ಪಕ್ಷಿಗಳಿಗೆ ದೇವದೇವತೆಗಳ ವಾಹನದ ಸ್ಥಾನವನ್ನು ನೀಡಿ ಪೂಜಿಸಿದರು. ಪ್ರಾಣಿಗಳನ್ನು ಅನವಶ್ಯಕವಾಗಿ ವಧಿಸಬಾರದು 'ಅಹಿಂಸಾ ಪರಮೋಧರ್ಮ' ಪಶುಪಕ್ಷಿಗಳಿಗೆ ಆಹಾರದ ವ್ಯವಸ್ಥೆ ಮಾಡಬೇಕು, ಬೇಸಿಗೆಯಲ್ಲಿ ನೀರುಣಿಸಬೇಕು ಎಂಬೆಲ್ಲಾ ಮಾತುಗಳು ಇಂದಿಗೂ ಚಾಲ್ತಿಯಲ್ಲಿದೆ. ಮರ ಗಿಡಗಳನ್ನು ದೇವರ ಆವಾಸ ಸ್ಥಾನವೆಂದು ಬಗೆದು ಆರಾಧಿಸಿದರು. ಅರಳೀಮರಕ್ಕಂತೂ 'ಮೂಲತೋ ಬ್ರಹ್ಮರೂಪಾಯ, ಮಧ್ಯತೋ ವಿಷ್ಣುರೂಪಿಣೇ। ಅಗ್ರತಃ ಶಿವರೂಪಾಯ ವೃಕ್ಷರಾಜಾಯತೇನಮಃ॥ ಎಂದು ತ್ರಿಮೂರ್ತಿಗಳ ಆವಾಸಸ್ಥಾನವೆಂದು ಕರೆದದ್ದು ಇದರ ಪ್ರತೀಕವೇ ಹೌದು.

ಇನ್ನು ಭೂಮಿಯನ್ನು ಭೂಮಾತೆ, ಭೂದೇವಿ, ವಿಷ್ಣುಪತ್ನಿ ಎಂದೇ ಕರೆದರು. ಬೆಳಗೆದ್ದು ನೆಲದ ಮೇಲೆ ಕಾಲೂರುವ ಮುನ್ನ 'ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ' ಎಂದು ಪ್ರಾರ್ಥಿಸಿದರು. ಎಳೆ ವಯಸ್ಸಿನಲ್ಲಿ ಸಂಜೆ ದೀಪ ಹಚ್ಚಿದ ನಂತರ ಹೊರಗಡೆ ಕುಣಿಯುತ್ತಾ ಆಟವಾಡುತ್ತಿದ್ದರೆ ನಮ್ಮ ತಾಯಿ 'ಅಪ್ಪಾ, ಆಟ ಆಡುವುದನ್ನು ನಿಲ್ಲಿಸಿ, ಭೂಮಿತಾಯಿ ತನ್ನ ಮಕ್ಕಳಿಗೆ ಹಾಲು ಕುಡಿಸುವ ಸಮಯವಾಯಿತು' ಎಂದು ಹೇಳಿದ್ದು ಇನ್ನೂ ನನ್ನ ಕಿವಿಯಲ್ಲಿ ಗುಯ್ ಗುಡುತ್ತಿದೆ. ನಮ್ಮೆಲ್ಲ ಸಾಧು ಸಂತರು, ಮಹಾಪುರುಷರು ಸಮಾಜಕ್ಕೆ ಬೋಧಿಸಿದ್ದು ಇದೇ ಪಾಠವನ್ನು. ನದಿಗಳೆಲ್ಲದರ ಪ್ರತೀಕ– ಗಂಗಾಮಾತೆ, ಪಶುಪಕ್ಷಿಗಳ ಪ್ರತೀಕ– ಗೋಮಾತೆ– ಗಿಡಮರಗಳ ಪ್ರತೀಕ ಪ್ರಕೃತಿಮಾತೆ. ಇದನ್ನು ಕೇವಲ ರಕ್ಷಿಸುವುದಷ್ಟೇ ಅಲ್ಲ ಆರಾಧಿಸಿ ಎಂದು ಕರೆನೀಡಿದರು.

ಆಧುನಿಕ ವಿದ್ಯಾಭ್ಯಾಸ ಮಾಡಿದ ನಾವಿಂದು ಇದೆಲ್ಲಾ ಗೊಡ್ಡು ಪುರಾಣ, ಎಂದು ಜರೆದು ಕಣ್ಮುಚ್ಚಿ ಪಾಶ್ಚಾತ್ಯರ ಅನುಕರಣೆ ಮಾಡತೊಡಗಿದೆವು. 'ವೇದವಾಕ್ಯ ಪ್ರಮಾಣಂ' ಎಂದು ಬಗೆದ ಸಂಸ್ಕೃತಿ 'ಸಾಹೇಬ ವಾಕ್ಯ ಪ್ರಮಾಣಂ' ಎಂಬುದನ್ನು ಅನುಕರಿಸಲು ಪ್ರಾರಂಭಿಸಿದರು. ಇದೀಗ ಪಾಶ್ಚಾತ್ಯರೇ ಬ್ಯಾಕ್ ಟು ಈಸ್ಟ್ ಎನ್ನತೊಡಗಿದ್ದಾರೆ.

ಡೇವಿಡ್ ಎಲ್ಲಸನ್, ಸನ್ ಡಿ ಇಮೋರಿಸ್, ಜೇನ್ ಕೋಹೆನ್ ಎಂಬ ಅಮೆರಿಕಾ ದೇಶದ ವಿದ್ವಾಂಸರು ಮಂಡಿಸಿರುವ ತಮ್ಮ ಸಂಶೋಧನಾ ಪ್ರಬಂಧದಲ್ಲಿನ ಈ ವಾಕ್ಯಗಳನ್ನು ಗಮನಿಸಿ "one substantial body of research we review reveals that forest, water and energy interactions provide the foundations for carbon storage, for cooling terrestrial surfaces and for distributing water resource our understanding how trees and forests influence water, energy and carbon cycles has important implications" ನದಿಗಳ ದುರ್ಬಳಕೆ, ಕಾಡಿನ ನಾಶ, ಅತಿ ಕೈಗಾರಿಕೀಕರಣ, ಖನಿಜತೈಲದ ವಿಪರೀತ ಬಳಕೆ, ಇವುಳಿಂದಾಗುತ್ತಿರುವ ವಾತಾವರಣದಲ್ಲಿನ ಬಿಸಿ ಏರಿಕೆ ಇವೆಲ್ಲವು ಗಳು ಮಾನವ ಜೀವನವನ್ನು ನರಕ ಸದೃಶ ಮಾಡುತ್ತಿರುವುದನ್ನು ಜಗತ್ತು ಕಂಡುಕೊಂಡಿದ್ದು ಪ್ಲಾಸ್ಟಿಕ್ ಮಲಿನತೆ, ಮಾನವ ಜೀವನದ ಎಲ್ಲ ಮುಖಗಳ ಮೇಲೆ ಪರಿಣಾಮ ಬೀರುತ್ತಿದ್ದು ಜಾಗತಿಕ ತುರ್ತು ಪರಿಸ್ಥಿತಿಯನ್ನು ಉಂಟುಮಾಡಿದೆ. ನಾವು ಕುಡಿಯುವ ನೀರು, ಉಸಿರಾಡುವ ಗಾಳಿ, ಉಣ್ಣುವ ಅನ್ನವನ್ನು ವಿಷವಾಗಿಸುತ್ತಿರುವ, ಜಗತ್ತಿನ ಸಾಗರಗಳನ್ನು ಸಮುದ್ರ ದಂಡೆಗಳನ್ನು ನದಿ ಪರ್ವತಗಳನ್ನು ನಾಶಮಾಡುತ್ತಿರುವ ಭಸ್ಮಾಸುರ ಈ ಪ್ಲಾಸ್ಟಿಕ್ ಮಲಿನತೆ.

### ಈ ಭಸ್ಮಾಸುರರ ಆರ್ಭಟ ಹೇಗಿದೆ

1. ಕ್ರಿಕೆಟ್ ಪಟು ಹಾರ್ದಿಕ ಪಾಂಡ್ಯ ಆರು ಬಾರಿ ಚಂಡೆಸೆಯುವ ಸಮಯದಲ್ಲಿ ಕಸ ಸಾಗಿಸುವ ಲಾರಿಯಷ್ಟು– ಪ್ಲಾಸ್ಟಿಕ್ ವಸ್ತು ಸಮುದ್ರಗಳಲ್ಲಿ ವಿಸರ್ಜನೆಯಾಗುತ್ತಿದೆ.
2. ಪ್ರತಿ ವರ್ಷ ಜಗತ್ತಿನಲ್ಲಿ 500 ಬಿಲಿಯನ್ ಪ್ಲಾಸ್ಟಿಕ್ ಚೀಲಗಳನ್ನು ಉಪಯೋಗಿಸಲಾಗುತ್ತಿದೆ.

**ಪುಟ 14 ಕ್ಕೆ ➤**

**1. ಈ ಜೂನ್ 5ನೇ ತಾರೀಖು ಎಲ್ಲ ಶಾಲೆ ಕಾಲೇಜುಗಳಲ್ಲಿ ಪ್ರಾರ್ಥನಾ ಸಭೆಯಲ್ಲಿ 'ವಿನಾಶಕಾರಿ ಪ್ಲಾಸ್ಟಿಕ್' ಬಗ್ಗೆ ಮಕ್ಕಳಿಗೆ ತಿಳಿಯಪಡಿಸಿರಿ.**
**2. ಪ್ಲಾಸ್ಟಿಕ್ ಮಲಿನತೆಯ ಬಗ್ಗೆ ಅರಿವುಂಟುಮಾಡಲು ಪ್ರಬಂಧ ಸ್ಪರ್ಧೆ. ಭಾಷಣ ಇತ್ಯಾದಿ ಏರ್ಪಡಿಸಿರಿ.**
**3. ಅತಿಯಾಗಿ ಪ್ಲಾಸ್ಟಿಕ್ ಬಳಸುವುದಿಲ್ಲವೆಂಬ ಪ್ರತಿಜ್ಞೆ ಮಾಡಿಸಿರಿ.**

# ಹೊಸ ವರ್ಷ – ಹೊಸ ಹರ್ಷ

'ಶ್ವೇತಾದ್ರಿ'
ನಿವೃತ್ತ ಮುಖ್ಯಶಿಕ್ಷಕರು, ಬೆಂಗಳೂರು

**ಹೊ**ಸ ವರ್ಷ 2018 ಬಂದು 5 ತಿಂಗಳು ಕಳೆಯಿತು. ನಮ್ಮ ಹೊಸ ವರ್ಷ ಯುಗಾದಿಯೂ ಬಂದು ಎರಡು ತಿಂಗಳಾಯಿತು. ಈಗ ಯಾವುದು ಹೊಸ ವರ್ಷ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತೇ ? ಬೇಸಗೆ ರಜೆಯ ನಂತರ ಶಾಲೆಯ ಪುನರಾರಂಭವೇ ಶಿಕ್ಷಕರಿಗೆ ಹೊಸ ವರ್ಷವಲ್ಲವೇ ? ಏಪ್ರಿಲ್ 10 ರಿಂದ ವಿದ್ಯಾರ್ಥಿಗಳೊಂದಿಗೆ ನಾವೂ ಬೇಸಗೆಯ ರಜೆಯ ಸವಿಯನ್ನು ಅನುಭವಿಸುತ್ತಿದ್ದೇವಲ್ಲ ! ? ಶಿಕ್ಷಕರಾದ ನಮಗೆ ರಜೆ ಎಲ್ಲಿ ಬಂತು ? ಮೌಲ್ಯಮಾಪನ, ಚುನಾವಣೆಯ ಕೆಲಸದ ಹೊರೆ. ಇವೆಲ್ಲ ಮುಗಿಸುವ ವೇಳೆಗೆ ಶಾಲೆ ಪುನರಾರಂಭವಾಗಿಯೇ ಬಿಟ್ಟಿತು ಎಂದು ನಿಟ್ಟುಸಿರು ಬಿಡುವ ಪರಿಸ್ಥಿತಿ ಶಿಕ್ಷಕರದು. ಈ ಎಲ್ಲಾ ಕೆಲಸಗಳ ಹೊರೆಯ ನಡುವೆಯೇ ಅಲ್ಪ ಸ್ವಲ್ಪ ರಜೆಯ ಸವಿಯನ್ನೂ ಅನುಭವಿಸಿದ್ದೇವೆ. ಈ ನಡುವಿನಲ್ಲೇ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವೂ ಪ್ರಕಟವಾಗಿದೆ. ನಮ್ಮ ಶಾಲೆಗಳಲ್ಲಿ ಒಳ್ಳೆಯ ಫಲಿತಾಂಶದ ಜೊತೆಗೇ ನಾವು ಬೋಧಿಸಿದ ವಿಷಯಗಳಲ್ಲಿ ಉತ್ತಮ ಫಲಿತಾಂಶ ಗಳಿಸಿದ ಸಂತೋಷದಲ್ಲಿ ನಾವು ಹೊಸ ಹುರುಪಿನಿಂದ, ಉತ್ಸಾಹದಿಂದ ಮುಂದಿನ ಶೈಕ್ಷಣಿಕ ವರ್ಷವನ್ನು ಬರಮಾಡಿಕೊಳ್ಳೋಣ.

ಶೈಕ್ಷಣಿಕ ವರ್ಷ ಮೇ 20 ರಿಂದ ಏಪಿಲ್ 10ರವರೆಗೆ. ಈ ಅವಧಿಯಲ್ಲಿ ಪ್ರತಿ ತಿಂಗಳೂ ನಾವು ಬೋಧಿಸಬೇಕಾದ ವಿಷಯಗಳನ್ನು ಇಲಾಖೆಯ ನಿಯಮಕ್ಕನುಗುಣವಾಗಿ ತಯಾರಿಸಿಕೊಂಡು, ಅದಕ್ಕೆ ತಕ್ಕಂತೆ ಪಾಠಯೋಜನೆ ತಯಾರಿಸಿ ಬೋಧಿಸುತ್ತೇವೆ. ಕಾಲಕಾಲಕ್ಕೆ ಪ್ರಾಜೆಕ್ಟ್‌ಗಳನ್ನು ವಿದ್ಯಾರ್ಥಿಗಳಿಂದ ಮಾಡಿಸಿ (?), ಘಟಕ ಪರೀಕ್ಷೆ, ಮೌಲ್ಯಾಂಕನ ಪರೀಕ್ಷೆಗಳನ್ನು ನಡೆಸುತ್ತೇವೆ. ಇದಿಷ್ಟೇ ಬೋಧನೆಯೇ ಎಂಬ ಪ್ರಶ್ನೆ ಬಹುತೇಕ ಶಿಕ್ಷಕರನ್ನು ಕಾಡದೆ ಇರದು. ತರಗತಿಗಳಲ್ಲಿ ವಿದ್ಯಾರ್ಥಿಗಳು ವರ್ತಿಸುವ ರೀತಿ, ಗುರುಹಿರಿಯರ ಬಗೆಗಿನ ಅವರ ಮನೋಭಾವಗಳನ್ನು ಗಮನಿಸಿದಾಗ ಶಿಕ್ಷಣ ವಿದ್ಯಾರ್ಥಿಗಳ ಶೀಲ ನಿರ್ಮಾಣವನ್ನೂ ಮಾಡಬೇಕು ಎಂಬ ಸತ್ಯ ನಮ್ಮಲ್ಲಿ ಜಾಗೃತವಾಗುತ್ತದೆ. ಹಿಂದೆ ಗುರುಕುಲಗಳಲ್ಲಿ, ಅಷ್ಟೇಕೆ ಮೂವತ್ತು– ನಲವತ್ತು ವರ್ಷಗಳ ಹಿಂದೆ ವಿದ್ಯಾರ್ಥಿಗಳ ಶೀಲ ನಿರ್ಮಾಣಕ್ಕೆ ಹೆಚ್ಚು ಒತ್ತು ಇತ್ತು. ಹೌದು, ಆಗ ಶಿಕ್ಷಕರಿಗೆ ಈಗಿನಷ್ಟು ಪಠ್ಯಕ್ರಮದ ನಿರ್ಬಂಧವಿರಲಿಲ್ಲ. ವಿಷಯದ ಹೊರೆ ಇರಲಿಲ್ಲ. ಶೀಲ ನಿರ್ಮಾಣದ ಶಿಕ್ಷಣ ನೀಡಲು ಸಾಧ್ಯವಾಗುತ್ತಿತ್ತು, ಸಮಯ ಸಿಕ್ಕುತ್ತಿತ್ತು ಎಂದು ಅನಿಸುತ್ತದೆ. ಅದು ನಿಜವೂ ಇರಬಹುದು.

ಮನಸ್ಸಿದ್ದರೆ ಮಾರ್ಗವಲ್ಲವೇ ?ನಮ್ಮ ವೇಳಾಪಟ್ಟಿಯಲ್ಲಿ ಗ್ರಂಥಾಲಯ, ನೀತಿ ಶಿಕ್ಷಣ ಮುಂತಾದ ಚಟುವಟಿಕೆಗಳಿಗೆ ಅವಧಿ ನಿಗದಿತವಾಗಿರುತ್ತದೆ. ಈ ತರಗತಿಗಳು ಬಹುತೇಕ ಗಣಿತ, ವಿಜ್ಞಾನ... ಮುಂತಾದ ಪರೀಕ್ಷಾ ವಿಷಯಗಳ ಬೋಧನೆಗೆ ಬಳಸುತ್ತೇವೆ. ತಿಂಗಳಲ್ಲಿ ಒಂದೆರಡು ವಾರವಾದರೂ ಈ ಅವಧಿಗಳನ್ನು ವ್ಯಕ್ತಿತ್ವ ನಿರ್ಮಾಣ ವಿಷಯಗಳಿಗಾಗಿ ಬಳಸಿದರೆ ಸ್ವಲ್ಪವಾದರೂ ಉತ್ತಮ ವ್ಯಕ್ತಿತ್ವ ರೂಪಿಸಲು ಸಹಾಯವಾಗುತ್ತದೆ. ರಾಮಾಯಣ, ಮಹಾಭಾರತದಂತಹ ಕಾವ್ಯಗಳ ಆದರ್ಶ ಪಾತ್ರಗಳ ಪರಿಚಯ ಮಾಡಿಸುವುದು ; ವೇದ, ಉಪನಿಷತ್ತುಗಳ ಮಹತ್ತ್ವವನ್ನು ತಿಳಿಸಿಕೊಡಬಹುದು. ಶ್ರೀರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಶಾರದಾದೇವಿಯುವರ ವ್ಯಕ್ತಿತ್ವಗಳನ್ನು ಪರಿಚಯಿಸಬಹುದು. ಭಾರತೀಯ ಪರಂಪರೆಯ ಸಂವತ್ಸರಗಳು, ದಿನಗಳು, ಮಗ್ಗಿ ಮುಂತಾದವುಗಳನ್ನು ಹೇಳಿಕೊಡಬಹುದು.ಶಾಲೆಯ ಗ್ರಂಥಾಲಯದ ಅವಧಿಯಲ್ಲಿ ವಿದ್ಯಾರ್ಥಿಗಳನ್ನು ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿ ಸಾಧಕರ, ಮಹನೀಯರ ಪುಸ್ತಕಗಳನ್ನು ಓದುವಂತೆ ಪ್ರೋತ್ಸಾಹಿಸಿ, ಅವರಲ್ಲಿ ಓದುವ ಅಭಿರುಚಿಯನ್ನು ಬೆಳೆಸಬೇಕಾದುದು ಅತ್ಯವಶ್ಯ. ತಿಂಗಳಿಗೊಮ್ಮೆ ಶಾಲೆಯಲ್ಲಿನ ನೈತಿಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಪರಿಣತರಿಂದ ಉಪನ್ಯಾಸಗಳನ್ನು ಏರ್ಪಡಿಸುವುದು ; ಮಧ್ಯಂತರ ರಜೆಯ ಕಾಲದಲ್ಲಿ ಎರಡು– ಮೂರು ದಿವಸಗಳು ನೈತಿಕ ಶಿಕ್ಷಣ ಶಿಬಿರಗಳನ್ನು ಆಯೋಜಿಸುವುದರ ಮೂಲಕ ಮಕ್ಕಳಿಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸಬಹುದು. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಪ್ರಯತ್ನ ಹೆಚ್ಚಾಗಿ ಆದರೆ ಮಕ್ಕಳಲ್ಲಿ ನೈತಿಕತೆ ಬೆಳೆದು, ಗುಣವಂತರಾಗಿ, ಉತ್ತಮ ಶೀಲವಂತರಾಗಿ ರೂಪುಗೊಳ್ಳುತ್ತಾರೆಂಬ ದೃಢವಿಶ್ವಾಸದೊಂದಿಗೆ ಕಾರ್ಯ ಪ್ರವೃತ್ತರಾಗೋಣ. ಶಿಕ್ಷಕರಾಗಿ ಇದು ನಮ್ಮ ಕರ್ತವ್ಯವೂ ಹೌದು. ●

**"ಶಿಕ್ಷಣವೆಂದರೆ ನಿಮ್ಮ ಮಿದುಳಿನ ಒಳಗೆ ತುರುಕಿಸಿದ ಮತ್ತು ನಿಮ್ಮೊಳಗೆ ನಿಮ್ಮ ಬದುಕಿನುದ್ದಕ್ಕೂ ಪಚನಗೊಳ್ಳದೇ ಹರಿದಾಡುವ ಸರಕು ಅಲ್ಲ. ಬದುಕನ್ನು ಕಟ್ಟುವ ಮನುಷ್ಯನನ್ನು ನಿರ್ಮಿಸುವ ಕಲ್ಪನೆಗಳನ್ನು ಕರಗತಮಾಡಿಕೊಂಡು ಚಾರಿತ್ರ್ಯವನ್ನು ಉದ್ದೀಪನಗೊಳಿಸುವ ಶಿಕ್ಷಣ ಬೇಕು. ನೀವು ಐದು ಕಲ್ಪನೆಗಳನ್ನು ಕರಗತ ಮಾಡಿಕೊಂಡು ಆ ಮೂಲಕ ನಿಮ್ಮ ಬದುಕನ್ನೂ ಚಾರಿತ್ರ್ಯವನ್ನೂ ರೂಪಿಸಿಕೊಂಡಿದ್ದಲ್ಲಿ ಇಡೀ ಗ್ರಂಥಾಲಯವನ್ನೇ ಬಾಯಿಪಾಠ ಮಾಡಿದ ಮನುಷ್ಯನಿಗಿಂತ ನಿಮಗೆ ಹೆಚ್ಚಿನ ಶಿಕ್ಷಣ ಸಿಕ್ಕಿದೆ ಎಂದು ಭಾವಿಸಬೇಕು. ನಮಗೆ ಎಂತಹ ಶಿಕ್ಷಣ ಬೇಕು ಅಂದರೆ ಅದರಿಂದ ಚಾರಿತ್ರ್ಯ ನಿರ್ಮಾಣವಾಗಬೇಕು. ಮನಸ್ಸಿನ ಶಕ್ತಿ ವೃದ್ಧಿಯಾಗಬೇಕು. ಜ್ಞಾನ ವಿಕಸಿಸಬೇಕು ಮತ್ತು ಆ ಮೂಲಕ ಆತ ತನ್ನ ಕಾಲುಗಳ ಮೇಲೆ ನಿಲ್ಲುವಂತಾಗಬೇಕು.**



**– ಸ್ವಾಮಿ ವಿವೇಕಾನಂದ**

# ಶಿಕ್ಷಣದ ನೆಪದಲ್ಲಿ ಶಿಕ್ಷೆ ಕೊಟ್ಕೊಳ್ಳೋದು ನಿಲ್ಸಿ ಪ್ಲೀಸ್...!

ಆಚಾರ್ಯ ಮಹಾನಿಧಿ
ಆಯುರ್ವೇದ ಸಂಶೋಧಕ

**ಯಾ**ರೋ ಕನಕದಾಸರಂತೆ..! ನಾನು ಹೋದರೆ ಹೋದೇನು ಅಂದ್ರಂತೆ. ಅವ್ರು ಹೋದ್ರು.. ಅವ್ರಾದ್ಮೇಲೆ ಅವ್ರ ಶಿಷ್ಯರೂ ಹೋದ್ರು. ಆದ್ರೆ ಏನ್ಮಾಡೋದು.. ಆ ಕಥೆ ಹೇಳಿದ ನಮ್ಮ ಗುರುನೂ ಎಲ್ಲಿಗೂ ಹೋಗ್ಲಿಲ್ಲ.. ಆ ಕಥೆ ಕೇಳ್ಕಂಡು ನಾನೂ ಎಲ್ಲಿಗೂ ಹೋಗಕ್ಕಾಗ್ಲಿಲ್ಲ. ಇದು ಭಾವೋದ್ವೇಗದ ಪರಮಾವಧಿ ಅಲ್ಲ. ಇರುವ ಅಸ್ತಿತ್ವದ ಅರಿವಾದಾಗ ಬರುತ್ತಿರುವ ಉದ್ಗಾರದ ಮಾತುಗಳು. ಆದರೆ ಇಂಥಹ ಬಹಳ ಸಂದರ್ಭಗಳಲ್ಲಿ ಕಂಡುಬರುವ ಪ್ರಧಾನವಾದ ಅಂಶವೆಂದರೆ ಎಲ್ಲರೂ ಫಲಿತಾಂಶಕ್ಕೆ ಮಹತ್ವ ಕೊಡುವವರೇ ಹೊರತು ಅದನ್ನು ಸಾಧಿಸುವ ಮಾರ್ಗಕ್ಕಲ್ಲ. ಜ್ಞಾನಪಡೆದು ಸೋತವರಿಲ್ಲ. ಪಡೆದ ಜ್ಞಾನವನ್ನು ಬಳಸದೇ ಸೋತವರುಂಟು. ಪ್ರಸ್ತುತ ಕಾಲಮಾನದಲ್ಲಿ ವಿದ್ಯೆ ಎನ್ನುವುದು ನಡೆಯುತ್ತಿರುವ ರೀತಿ ಹಾಗೂ ವಿದ್ಯಾವಂತರು ಎನಿಸಿಕೊಳ್ಳುವವರು ಬದುಕುತ್ತಿರುವ ರೀತಿ ನೋಡಿದಾಗ, ಮೇಲೆ ಕಂಡ ಕನಕದಾಸರ ಮಾತಿನ ನಾನು ಹೋದರೆ ಹೋದೇನು ಎಂಬಲ್ಲಿನ ನಾನು ಎಂಬುದರ ಅರ್ಥವಾದ ಅಹಂಕಾರ ವಿದ್ಯೆಯ ಫಲಿತಾಂಶವಾಗಿರುವುದು ಕಂಡುಬರುತ್ತದೆ ಹೊರತಾಗಿ ಆ ಅಹಂಕಾರವನ್ನು ಕಳೆದುಕೊಳ್ಳುವುದರ ಕಡೆಗೆ ನಮ್ಮ ಗಮನಗಳಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ವಿದ್ಯೆಯ ನೈಜ ಫಲಿತಾಂಶ ವಿನಯವಂತಿಕೆ, ನಿರಹಂಕಾರಿ ಗುಣ ಇತ್ಯಾದಿ. ಈಗೆಲ್ಲವೂ ತದ್ವಿರುದ್ಧ.

ಪ್ರಸ್ತುತ ಕಾಲಮಾನದ ವಿದ್ಯಾಭ್ಯಾಸವನ್ನು ಮೂರು ಸ್ತರಗಳಲ್ಲಿ ನೋಡಬಹುದು. 1) ಸ್ವಾಧ್ಯಾಯ 2)ಪಾರಂಪರಿಕ ಕಲಿಕೆ 3) ನಿಯಂತ್ರಿತ ಶಿಕ್ಷಣ ಎಂಬುದಾಗಿ. ಪಾರಂಪರಿಕ ವಿದ್ಯಾಭ್ಯಾಸದಲ್ಲಿ ಗುರುವನ್ನು ಮೀರಿಸುವಂತಿಲ್ಲವೆಂಬ ಧೋರಣೆಯೊಂದಿಗೆ ನಡೆಯುತ್ತಿರುವ ಗುರುವೃಂದ. ಶಿಷ್ಯರೂ ಗುರುಗಳ ಬಗೆಗಿನ ತಾತ್ಸಾರಭಾವದೊಂದಿಗೆ ಕಲಿಯುತ್ತಾರೆ. ಸ್ವಾಧ್ಯಾಯದಲ್ಲಿ ಓದಿಮುಗಿದವರು ಎಂಬ ಪಟ್ಟಿ ಇಂದಿಗೂ ಸಿದ್ಧವಾಗಿಲ್ಲ. ಆಗುವುದೂ ಇಲ್ಲ. ಕಾರಣವೆಂದರೆ ಪ್ರತಿನಿತ್ಯವೂ ಓದುವುದೇ ಕಾಯಕವಾದವನಿಗೆ ಮುಗಿಯುವ ಮಾತೆನಿತು. ದುರಂತವೆಂದರೆ ಇವರಿಗೆ ಪದವಿಯ ಅವಶ್ಯಕತೆ ಇಲ್ಲ, ಪದವಿಯಿಲ್ಲದೆ ಇವರನ್ನು ಅಳಿಯುವುದನ್ನು ಬಿಡುವುದಿಲ್ಲ. ಇನ್ನು ನಿಯಂತ್ರಿತ ಶಿಕ್ಷಣಕ್ಕೆ ಬರುವುದಾದರೆ ಪದವೇ ಹೇಳುವಂತೆ ನಿಯಂತ್ರಿತ ಶಿಕ್ಷಣ. ಇಲ್ಲಿ ಎಲ್ಲವೂ ನಿಯಂತ್ರಿತ. ಎಷ್ಟು ಓದಬೇಕು ಎನ್ನುವುದರಿಂದ ಹಿಡಿದು ಯಾರು, ಎಲ್ಲಿ, ಹೇಗೆ, ಏನು, ಹೀಗೆ ಪ್ರತಿಯೊಂದೂ ಪೂರ್ವನಿರ್ಧಾರಿತ. ಮೇಲ್ಕಂಡ ಮೂರು ಸ್ತರಗಳು ಕ್ರಮವಾಗಿ ತಮ್ಮ ಔನ್ನತ್ಯವನ್ನು ಕಾಪಾಡಿಕೊಳ್ಳುತ್ತವೆ. ಆದ್ರೂ ಪರಸ್ಪರವಾಗಿ ಅವರದೇ ಆದ ರೀತಿಯಲ್ಲಿ ನಾ ಮುಂದು ತಾ ಮುಂದು ಎನ್ನುವ ಹೋರಾಟ ಎಲ್ಲ ವರ್ಗಗಳಲ್ಲಿಯೂ ಇದೆ.

ಪ್ರಸ್ತುತ ಆಗಿರುವ ಸಮಸ್ಯೆ ಇಷ್ಟೇ..! ವಿದ್ಯೆಯ ಮಾನದಂಡ ಅಥವಾ ಫಲಿತಾಂಶ ದುಡ್ಡಾಗಿರುವುದು. ಒಂದು ವೇಳೆ ಅದಾಗಿರದಿದ್ದರೆ, ನಿಯಂತ್ರಿತ ಶಿಕ್ಷಣಕ್ಕೆ ಒಳಪಡುವ ವಿದ್ಯಾರ್ಥಿ, ಪಾರಂಪರಿಕ ಕಲಿಕೆಯನ್ನೂ ಮುಗಿಸಿ ನಂತರ ಸ್ವಾಧ್ಯಾಯಿಯಾಗುತ್ತಿದ್ದ. ಇಲ್ಲಿ ಯಾರು ಶ್ರೇಷ್ಠರು ಯಾರು ಅಮರರು ಅನ್ನೋದಕ್ಕಿಂತ ಏನು ಮಾಡಬಹುದು ಎಂದು ಗಮನಹರಿಸುವುದು ಉತ್ತಮ. ಅತಿಯಾದ ಬಿಗಿಯಿಂದ ಕೈಯಲ್ಲಿ ಹಿಡಿದಿರುವ ಮರಳು ಸೋರಿಹೋಗುತ್ತದೆ ಎನ್ನುವುದನ್ನು ನಾವು ಕೇಳಿ ತಿಳಿಯಬೇಕಿಲ್ಲ. ನಿಯಂತ್ರಿತ ಅಧ್ಯಯನವೇ ಸರ್ವಶ್ರೇಷ್ಠ ಎಂದಾದದ್ದು ಅತಿಯಾದ ಐಟೀಕರಣದಿಂದಾಗಿ. ದೇಶದಾದ್ಯಂತ ಎಲ್ಲಿ ಹೋದರೂ ಐಟಿ ಕ್ಷೇತ್ರವೊಂದು ಬಿಟ್ಟು ಉಳಿದೆಲ್ಲವೂ ವ್ಯರ್ಥ ಎನ್ನುವ ಮಟ್ಟದ ಧೋರಣೆ ಇಂಥಹ ಅನಾಹುತಕ್ಕೆ ಕಾರಣವಾಗಿದೆ. ಎಷ್ಟೇ ದೊಡ್ಡ ವ್ಯಕ್ತಿಯಾದರೂ ಗುರುವಿನ ಮುಂದೆ ತಲೆತಗ್ಗಿಸಿ ಗೌರವದಿಂದ ನಡೆದುಕೊಳ್ಳುತ್ತಿದ್ದ ನಮ್ಮ ದೇಶದಲ್ಲಿ, ಅದೇ ಗುರು ಬೆಳೆದು ನಿಂತ ತನ್ನ ಶಿಷ್ಯನ ಬಳಿಯಲ್ಲಿ ನಿಂತುಕೊಳ್ಳೋಕ್ಕೂ ಇರಿಸು ಮುರಿಸು ಅನುಭವಿಸೋ ಹಾಗೆ ಇಂದಿನ ಕಾಲದ ಶಿಷ್ಯರು ತಯಾರಾಗಿದ್ದಾರೆ ಎಂದು ನೆನೆಸಿಕೊಳ್ಳಲೂ

ದುಃಖವಾಗುತ್ತದೆ. ತನಗಿಂತ ಹಿರಿಯರ ಹೆಮ್ಮೆಯನ್ನು ಅವರ ಜಯದ ಅಹಂಕಾರವೆಂದು ಭಾವಿಸುವಂತೆ ಬೆಳೆಸಿದ ಪೋಷಕರ ಪಾಲೂ ಶಿಕ್ಷಣದ ಉನ್ನತಿ ಅವನತಿಗಳಲ್ಲಿ ಮಹತ್ತರವಾದದ್ದು ಎಂದು ಬಿಡಿಸಿ ಹೇಳಬೇಕಿಲ್ಲವಷ್ಟೇ..!

ಇನ್ನು ಗುರುಗಳ ಸ್ಥಾನದಲ್ಲಿ ನಿಂತು ಹೇಳುವುದಾದರೆ, ಒಂದಾನೊಂದು ಕಾಲವಿತ್ತು, ಅಲ್ಲಿ ಸದಾಚಾರವಂತ ಸದ್ಗುಣವಂತ ಹೀಗೇ ಅಂತ ಹೆಸರಿರೋ ಇಂಥವ್ರು ಇದ್ರು. ಅವರಿಗೆ ದುಡ್ಡು ಬೇಕಿಲ್ಲ, ಪ್ರಧಾನನೂ ಅಲ್ಲ. ಆದ್ರೆ ಶಿಷ್ಯ ಮಾತ್ರ ಉನ್ನತ ಸ್ಥಾನಕ್ಕೆ ಹೋಗಿನಿಲ್ಬೇಕು. ಹೆಸರು ಮಾಡ್ಬೇಕು.. ಅಂತಿದ್ರು. ಆದ್ರೆ ಇಂದಿನ ಸಮಾಜದಲ್ಲಿ ಎಲ್ಲವನ್ನೂ ದುಡ್ಡಿನಿಂದ ಅಳಿಯೋದಾಗತ್ತೆ. ಓಬ್ಬ ತಂದೆ, ಮಗನ ಇಂಜಿನಿಯರಿಂಗ್ ಶಿಕ್ಷಣಕ್ಕೆ 6 ಲಕ್ಷ ಹಣ ಹಾಕ್ತಿದ್ದಾನೆ ಅಂದ್ರೆ ಅವನ ಮಗ ತಿಂಗಳಿಗೆ 50 ಸಾವಿರ ದುಡೀಬೇಕು. ಇಂಜಿನಿಯರ್ ಮುಗಿದ 3 ವರ್ಷದೊಳಗೆ ತಾನು ಹಾಕಿದ ಹಣ ಬಡ್ಡಿಸಮೇತ ಮರಳಿಬರುತ್ತೆ ಅಂತ ಲೆಕ್ಕಹಾಕೋವಾಗ, ಗುರುಗಳೂ ಸೇರಿದ್ರು ನಾವೇನು ಕಮ್ಮಿ ಅಂತ..! ವರ್ಷದಲ್ಲಿ ಬರೋ ಒಂದೇ ಪರೀಕ್ಷೆ ನೆಪಹೇಳಿ ಆ ಲಕ್ಷಾಂತರ ಹಣ ತೆಗೆದುಕೊಳ್ಳೋಕ್ಕೆ ನಿಂತ್ರು. ಉತ್ತಮ ಗುಣಮಟ್ಟದ ಶಿಕ್ಷಣ ಕೊಟ್ರೆ ಪರ್ವಾಗಿಲ್ಲ.. ಕೆಲವರು ಅದೂ ಕೊಡೋಲ್ಲ. ಒಟ್ನಲ್ಲಿ ಎಲ್ಲ ದುಡ್ಡಿನಿಂದ ತುಂಬಿಹೋಗಿದೆ. ಹ್ಞಾಂ.. ! ಹಾಗಂದಮಾತ್ರಕ್ಕೆ ಎಲ್ಲರೂ ಹೀಗೇ ಅಂತಲ್ಲ. ಕೆಲವರು ಕೇವಲ ಉತ್ತಮ ಶಿಕ್ಷಣಕ್ಕೆ ತಮ್ಮ ಜೀವನ ಮುಡಿಪಾಗಿಟ್ಟು ಬರುವ ಒಸಿ ದುಡ್ಡಲ್ಲೆ ಗಂಜಿಕುಡಿದು ಬದುಕ್ತಿದ್ದಾರೆ. ಆದ್ರೆ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಈ ಬಡಮೇಷ್ಟ್ರುಗಳು ಕಣ್ಣಿಗೂ ಕಾಣ್ಸಲ್ಲ. ಯಾಕಂದ್ರೆ ಜಾಸ್ತಿ ಹಣ ಕೇಳ್ತಿಲ್ಲ ಹಾಗಾಗಿ ಸರಿಯಾಗಿ ಹೇಳಿಕೊಡ್ತಾರೋ ಇಲ್ವೋ ಅಂತ. ಇಂಥಹ ಅನೇಕ ಕ್ಷುಲ್ಲಕ ಕಾರಣಗಳಿಗೆ ವಿದ್ಯೆ ತನ್ನ ಮಹತ್ವ ಕಳೆದುಕೊಳ್ತಿದೆ. ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನವೂ ಇಲ್ಲದ ಬುದ್ಧಿವಂತರಾಗ್ತಿದ್ದಾರೆ. ಅಂತಹ ಮಕ್ಕಳಿಂದ ಸಂಸ್ಕಾರಗಳನ್ನು ಬಯಸೋದು ತಪ್ಪು, ಯಾಕಂದ್ರೆ ಗಿಡ ಚಿಗುರಲ್ಲೇ ಕಸದ ಗಿಡವಾಗಿ ಹೋಗಿದೆ. ನನಗಿನ್ನೂ ನೆನಪಿದೆ. ಶಾಲೆಯ ಮೇಷ್ಟ್ರ ಶಾಲಾವಧಿಯಲ್ಲದೆ ಬೇರೆಡೆಯೂ ನಾವು ತರಲೆ ಮಾಡೋದು ನೋಡಿದ್ರೆ ಗದರುತ್ತಿದ್ರು. ಮೇಷ್ಟ್ರು ಅನ್ನೋದು ಒಂದು ಪೂರ್ಣಾವಧಿ ವೃತ್ತಿಯಾಗಿರ್ತಿತ್ತು. ಈಗ ಶಾಲೆ ಮುಗಿಯೋದು ಇರ್ಲಿ, ಅವರ ಪಾಠದ ಅವಧಿ ಮುಗಿದ

ಪುಟ 12 ಕ್ಕೆ ➤

➢ ಪುಟ 11 ರಿಂದ..... ಶಿಕ್ಷಣ...

ಕೂಡ್ಲೆ ನನಗೂ ಅವರಿಗೂ ಸಂಬಂಧ ಇಲ್ಲ ಅನ್ನೋ ಸ್ಥಿತಿ ನಿರ್ಮಾಣವಾಗ್ತಿದೆ.

ಇದ್ಯಾವುದೂ ನೋಡಿ ಹೀಗೆಲ್ಲ ನಡೀತಿದೆ ಎನ್ನುವುದರ ಬಗೆಗಿನ ಕಳಕಳಿಯ ದೂರು ಅಲ್ಲ. ಇದೆಲ್ಲ ತಿಳಿದಿದ್ದರೂ ಏನೂ ಮಾಡದೆ ಕೈಚೆಲ್ಲಿ ಕುಳಿತಿರುವುದು ನಮ್ಮ ನಿಮ್ಮ ದುರಂತ. ನಾಟ್ಯ ಕಲಿಸುವ ಗುರು ಕೇವಲ 1000 ರೂಪಾಯಿ ಮೌಲ್ಯದ ಪರೀಕ್ಷೆಗೆ 1000 ಪಟ್ಟು ಹೆಚ್ಚು ದುಡ್ಡನ್ನ ಕಲಿಸುವ ನೆಪದಲ್ಲಿ ತನ್ನ ಶಿಷ್ಯರಿಗೆ ಹೇರಿದರೆ ಆ ವಿದ್ಯೆಯಲ್ಲಿ ಮಹತ್ವವೆನಿತು ಉಳಿದೀತು.? ಸಂಸ್ಕಾರದ ಆಕರವಾಗಬೇಕಿದ್ದ ಶಿಕ್ಷಣಸಂಸ್ಥೆ ನೂರಾರು ರೀತಿಯಲ್ಲಿ ಹಣ ಮಾಡುವ ಮಾಧ್ಯಮವಾದರೆ ವಿದ್ಯಾರ್ಥಿಯಲ್ಲಿ ಸಂಸ್ಕಾರವಾದ್ರೂ ಎಲ್ಲಿಂದ ಬರಬೇಕು. ಸಂಸ್ಕಾರವಿಲ್ಲದ ಗಂಡು ಹೆಣ್ಣನ್ನು ಗೌರವದಿಂದ ಕಾಣುವುದಾದರೂ ಎಲ್ಲಿಂದ? ಸಂಸ್ಕಾರವರಿಯದ ಹೆಣ್ಣು ತನ್ನ ಸಂಸಾರವನ್ನು ಬೆಳಗುವುದಾದರೂ ಎಲ್ಲಿಂದ?

## ಅನುಕೂಲವನ್ನೇ ಸಾಧನವನ್ನೇ ಅತ್ಯಂತ ಪರಿಹಾರವಾಗಿಸಿಕೊಂಡೆವು..!

ಡಿಜಿಟಲ್ ಮಾಧ್ಯಮ ಬೆಳೆದು ಬಹಳ ವರ್ಷಗಳೇನು ಕಳೆದಿಲ್ಲವಾದರೂ ಹೆಮ್ಮರವಾಗಿ ಬೆಳೆದು ನಿಂತಿದೆ. ಇರುವುದೆಲ್ಲವೂ ಆನ್‌ಲೈನ್‌ನಲ್ಲಿ ಲಭ್ಯ. ಯಾವುದಕ್ಕೂ ಹುಡುಕುವ ಅವಶ್ಯಕತೆ ಇಲ್ಲ. ಬಹಳ ಅರ್ಥಪೂರ್ಣ ಪರಿಕರಗಳನ್ನು ಈ ಉದ್ಯಮ ಒದಗಿಸ್ತಿದೆ. ಅನಲಾಗ್‌ಅನ್ನು ಡಿಜಿಟಲ್ ಆಗಿ ಪರಿವರ್ತಿಸುವುದೇ ಡಿಜಿಟೈಸೇಷನ್. ಅಂದ್ರೆ ಕಣ್ಣಮುಂದಿರುವ ಭೌತಿಕ ವಸ್ತುವನ್ನು ಕಾಣದ ತಂತ್ರಜ್ಞಾನದಲ್ಲಿ ಅಭೌತಿಕ ಶರೀರದೊಂದಿಗೆ ಅಳವಡಿಸುವುದು ಅರ್ಥಾತ್ ತಾಂತ್ರೀಕೀಕರಣಕ್ಕೊಳಪಡಿಸುವುದು ಎಂದರ್ಥ. ಕೆಲವೊಮ್ಮೆ ಅತಿಯಾಗಿ ನೀರು ಕುಡಿಯುವುದು ರೋಗಕ್ಕೆ ಕಾರಣವಾಗುವಂತೆ ಅತಿಯಾದ ತಾಂತ್ರಿಕತನದಲ್ಲಿ ಮುಳುಗಿ ಸಾಮಾನ್ಯ ವಿಷಯಗಳನ್ನೂ ಕಳೆದುಕೊಂಡಿದ್ದೇವೆ. ಭೌತಿಕವಾಗಿ ಕಾಣುವ ಗುರುವನ್ನಂತೂ ಅಭೌತಿಕವಾಗಿ ಹಿಡಿಯಲು ಸಾಧ್ಯವಿಲ್ಲ ಎನ್ನುವುದನ್ನು ಸುಳ್ಳು ಮಾಡಿತು ಈ ತಂತ್ರಜ್ಞಾನ. ತಪ್ಪಿಲ್ಲ. ಆದ್ರೆ 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ', 'ಗುರುಮುಖೇನ ಯಾವಿದ್ಯಾ ಸಾವಿದ್ಯಾ ಯಾವಿಮುಕ್ತಯೇ' ಇಂಥಹ ಅನೇಕ ಹಿರಿಯರ ನುಡಿಗಳು ಸುಳ್ಳಲ್ಲ. ತಂತ್ರಜ್ಞಾನ ಕೇವಲ ಪರಿಕರವಾಗಿ ಗುರುವಿನ ಸಂಪರ್ಕವಿಲ್ಲದೆಯೇ ಕಲಿಯುವಂತಿಲ್ಲ ಎಂಬಂತೆ ನಮ್ಮ ಸಂಶೋಧಕರು ತಂತ್ರಾಂಶಗಳನ್ನು ತಯಾರಿಸಿದ್ದಿದ್ದರೆ ಸಂಸ್ಕಾರವನ್ನು ಉಳಿಸೋ ನಿಟ್ಟಲ್ಲಿ ಇವರ ಕೊಡುಗೆ ಅಪಾರವಾಗಿರ್ತಿತ್ತು. ಅನೇಕ ಅನುಭವಕಥನಗಳು, ಕಥೆಗಳು ಅಧ್ಯಾಪಕರ ಮನಸ್ಸಿನಲ್ಲಿಯೇ ಉಳಿದುಹೋದವು. ಅಭಿವ್ಯಕ್ತಿಗೆ ಎಂದಿರುವ ವೀಡಿಯೋ ಮಾಧ್ಯಮಗಳಲ್ಲಿಯೂ ಪೈಪೋಟಿ ಹೆಚ್ಚಿತು. ಮತ್ತೆ ಅದೇ ದುಡ್ಡಿನ ಜಗ್ಗಾಟ. ಇತ್ತ ಅಧ್ಯಾಪಕರನ್ನು ಬದಲಾಯಿಸುವ ನಿಟ್ಟಿನಲ್ಲಿ ಸಂಪೂರ್ಣ ಯಶಸ್ಸೂ ಕಾಣಲಿಲ್ಲ, ಅತ್ತ ಅಧ್ಯಾಪಕರಿಲ್ಲದೆ ಪರದಾಡುವುದನ್ನೂ ತಪ್ಪಿಸಲಾಗಲಿಲ್ಲ. ಆಯ್ಕೆ ಮಾಡುವ ಸಮಯಪ್ರಜ್ಞೆ, ಬಣ್ಣಬಣ್ಣದ ಮಾಧ್ಯಮ ನೋಡುವಾಗ ಬರುವುದಾದರೂ ಎಲ್ಲಿಂದ?

## ಪರಿಹಾರವೇನು?

ಸಿಸ್ಟಂ ಸರಿ ಇಲ್ಲ ಸರ್! ಶಾಲೆ ಕಾಲೇಜು ನಡೆಸ್ತಿರೋ ಜನಗಳ ದರ್ಬಾರು ಇತ್ತೀಚೆಗೆ ತುಂಬಾ ಜಾಸ್ತಿಯಾಯ್ತು ಸರ್ ! ಇದೆಲ್ಲ ಒಂದೆಡೆ ಇಟ್ಟು.. ಒಂದು ಕ್ಷಣ ಮುಕ್ತ ಮನಸ್ಸಿನಿಂದ ಯೋಚಿಸಿ. ನನ್ನ ಮಗ ಧನಿಕನೇ ಆಗಬೇಕು, ಬಂಗಲೆಯಲ್ಲೇ ಬದುಕಬೇಕು ಎನ್ನುವುದು ಪ್ರತಿಯೊಬ್ಬ ಪೋಷಕರ ಮನದಾಳದ ಮಾತು. ಆದ್ರೆ ಮಗುವಿನ ಬೌದ್ಧಿಕತೆ, ಅವನ ಆಸಕ್ತಿ ವಿಷಯ ಇದ್ಯಾವುದೂ ಪೋಷಕರ ಗಮನಕ್ಕೆ ಬರುವುದೇ ಇಲ್ಲ. ಗಮನಕ್ಕೆ ಬಂದಿರುವ ಪೋಷಕರೂ ಉಂಟು.. ಆದ್ರೆ ಪ್ರಪಂಚದಲ್ಲಿರುವ ಸಾಧ್ಯ ಅಸಾಧ್ಯ ಎಲ್ಲ ವಿದ್ಯೆಗಳಲ್ಲಿಯೂ ತಮ್ಮ ಮಗುವೇನು ಕಮ್ಮಿ?? ಎಂಬಂತೆ ಇರೋಬರೋ ಶಾಲೆಯ ಕಲೆ ವೈವಿಧ್ಯ ವೈಚಿತ್ರ್ಯಗಳಲ್ಲಿ ಮುಳುಗಿಸ್ತಾರೆ. ಮತ್ತೆ ಮರೆತೇ ಹೋಯ್ತು ಆ ಸಂಸ್ಕಾರ.. ಒಬ್ಬ ಮನುಷ್ಯ ತನ್ನ ಜೀವಿತಾವಧಿಯಲ್ಲಿ ಹೆಚ್ಚಾಗಿ ಮಲ್ಟಿ ಟಾಸ್ಕಿಂಗ್ ಮಾಡೋದು ತನ್ನ ಸ್ವಂತ ಬುದ್ಧಿ ಚಿಗುರೊಡೆದು.. ತನ್ನದು ಅಂತ ಹಲವಾರು ವಿಷಯಗಳನ್ನು ಒಮ್ಮೆಲೇ ಪ್ರೀತಿಸಿದಾಗ. ಆದ್ರೆ ಅಷ್ಟು ಹೊತ್ತಿಗಾಗಲೆ ಆತನಿಗೆ ಮಾಡುವುದು ಬಿಡುವುದರ ಬಗ್ಗೆ ಸರಿಯಾಗಿ ಅರಿವು ಮೂಡಿರುತ್ತದೆ.

ಡಿಜಿಟಲ್ ಮಾಧ್ಯಮದ ಉದ್ಯಮಿಗಳು ಸಾಧ್ಯವಾದಷ್ಟು ಸಂಸ್ಕಾರ ಸಾಧನಗಳನ್ನು ತರುವುದಲ್ಲದೆ, ಅಧ್ಯಾಪಕ ವಿದ್ಯಾರ್ಥಿ ನಡುವಣ ಬಾಂಧವ್ಯ ಬೆಳೆಯುವ ಪರಿಕರಗಳನ್ನು ಒದಗಿಸಿದರೆ ಮತ್ತಷ್ಟು ಅರ್ಥಪೂರ್ಣವಾಗುತ್ತದೆ.

ಮಕ್ಕಳಿಗೆ ವಿವೇಕಾನಂದರನ್ನು ಆದರ್ಶವಾಗಿಸಿಕೊಳ್ಳಿ ಎನ್ನುವ ಪೋಷಕರು ವಿವೇಕಾನಂದರ ಪೋಷಕರ ಆದರ್ಶಗಳನ್ನು ಯಾಕೆ ಅಳವಡಿಸಿಕೊಳ್ಳುವುದಿಲ್ಲ? ವಿವೇಕಾನಂದರಂತೆ ಆಗು ಎಂದು ಧ್ವನಿ ಎತ್ತುವ ಮುನ್ನ, ಅವರ ತಂದೆಯಂತೆ ನಿನಗೆ ಈ ಅದ್ಭುತ ಶರೀರ, ಶಾರೀರ ಕೊಟ್ಟಿದ್ದೇನೆ. ನಿನ್ನ ಆಸ್ತಿ ಅದೇ ಎನ್ನುವ ಗತ್ತೂ ಪೋಷಕರಲ್ಲಿರಬೇಕು. ಜ್ಞಾನಿಯಾಗು ಎನ್ನುವ ಧೈರ್ಯವೂ ಬೇಕು. ದೇಶದ ಬಗ್ಗೆ ದೇಶಪ್ರೇಮದ ಬಗ್ಗೆ ಆತ್ಮವಂಚನೆಯಲ್ಲದ ಅಭಿಮಾನ ಮೂಡಬೇಕು. ತಾನು ಯಾವ ಕೆಲಸವಾದರೂ ಮಾಡಲಿ, ಮಾಡುವ ಕೆಲಸದಲ್ಲಿ ನೈತಿಕತೆ ನಿಜಾಯ್ತಿ ಹೊಂದಿರಬೇಕು. 'ಪ್ರತಿಯೊಂದು ಕೆಲಸವೂ ದೇಶ ಕಟ್ಟುವಲ್ಲಿ ಸಹಾಯ ಮಾಡಲಿದೆ, ಹೀಗಾಗಿ ನೀನು ಮಾಡುವ ವೃತ್ತಿಯನ್ನೇ ದೇಶಸೇವೆಯೆಂದು ತಿಳಿದು ನಿಷ್ಕಲ್ಮಷವಾಗಿ ಮಾಡು' ಇಂಥಹ ಸಂಸ್ಕಾರ ಇಂದಿನ ಶಿಕ್ಷಣದಲ್ಲಿಯೂ ಸಿಗುತ್ತಿಲ್ಲ. ಪೋಷಕರೂ ಕೊಡುತ್ತಿಲ್ಲ. ಇದನ್ನು ಕೊಡುವ ಬಗ್ಗೆ ಸ್ವಲ ಆಳವಾಗಿ ಗಮನಹರಿಸಿದರೂ ದೇಶದ ಶಿಕ್ಷಣವನ್ನು ಬೇರೆಯದೇ ಸ್ಥಿತಿಯಲ್ಲಿ ಕಾಣಬಹುದು. ಬದುಕು ಒಂದು ಅವಶ್ಯಕತೆಯಲ್ಲ. ಅದೊಂದು ಜವಾಬ್ದಾರಿ. ಎಲ್ಲರೂ ತಮಗಾಗಿ ತಮ್ಮ ಸಂತೋಷಕ್ಕಾಗಿ ಬದುಕ್ತಾರೆ. ಬದುಕು ಒಂದು ಜವಾಬ್ದಾರಿ ಎಂದು ತಿಳಿಯೋಹೊತ್ತಿಗೆ, ಜೀವಿತಾವಧಿ ಸಮಯವೇ ಕಡಿಮೆ ಎನ್ನುವಷ್ಟು ದೂರ ಸರಿದಿರ್ತೀವಿ. ಹಾಗಾದರೆ ಸಮಸ್ಯೆ ಇರೋದು ಪಠ್ಯಪುಸ್ತಕದಲ್ಲಲ್ಲ. ಅಲ್ಲಿರುವ ವಿಷಯಗಳಲ್ಲೂ ಅಲ್ಲ. ಆ ವಿಷಯಗಳನ್ನು ಸಂಸ್ಕಾರದ ಹಂತದವರೆಗೂ ತರದಿರುವುದರಲ್ಲಿ ಎಂಬುದು ಸ್ಪಷ್ಟ. ವರ್ಣಾಶ್ರಮ ಯೋಗ್ಯವಾದ ವಿದ್ಯೆ ಎನ್ನುವ ಕಾಲದಲ್ಲಿಲ್ಲದ ನಾವು, ಪಡೆಯುತ್ತಿರುವುದನ್ನಾದರೂ ಅರ್ಥಪೂರ್ಣವಾಗಿ ಪರಿಪೂರ್ಣವಾಗಿ ಪಡೆಯಬೇಕು. ವಿದ್ಯೆ ಕಲಿತು ಅಹಂಕಾರವನ್ನು ಬಳುವಳಿಯಾಗಿ ಪಡೆಯುವ ನಾವು ಯಾವ ಜ್ಞಾನ ಪಡೆದೇವು? ಯಾವ ಮುಕ್ತಿ ಪಡೆದೇವು? ನನ್ನ ಒಂದೇ ವಿನಂತಿ ಅಂದ್ರೆ ಶಿಕ್ಷಣದ ನೆಪದಲ್ಲಿ ಶಿಕ್ಷೆ ಕೊಟ್ಕೊಳ್ಳೋದು ನಿಲ್ಸಿ ಪ್ಲೀಸ್!

ಕೃಪೆ : ವಿಕ್ರಮ

# ಚುನಾವಣೆ ಮುಗಿದಿದೆ. ಮುಂದೇನು?

**ಕ**ರ್ನಾಟಕ ವಿಧಾನ ಸಭೆಗೆ ಚುನಾವಣೆ ಮುಗಿದು ಫಲಿತಾಂಶವೂ ಬಂದು ಸರ್ಕಾರದ ರಚನೆಗೆ ಗೊಂದಲಗಳಾಗಿ ಕಿಚಡಿ ಸರ್ಕಾರ ಬಂದದ್ದೂ ಆಗಿದೆ. ಇದರ ಜತೆಜತೆಗೇ ಬಹಳಷ್ಟು ಜನರಿಗೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿನ ನಂಬಿಕೆಯೂ ಕಡಿಮೆಯಾಗುತ್ತಾ ಸಾಗಿದೆ.

ಚುನಾವಣೆ ಎಂದರೆ ತತ್ವ ಸಿದ್ಧಾಂತಗಳ ಮೇಲೆ ಚರ್ಚೆ ನಡೆದು ಪ್ರಜೆಗಳು ತಾವು ನಂಬಿರುವ ವಿಚಾರಧಾರೆಗೆ ಬದ್ಧರಾಗಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ. ಆದರೆ ಇಂದು ನಡೆಯುತ್ತಿರುವುದೇ ಬೇರೆ. ಅಭ್ಯರ್ಥಿಗಳಿಗೆ ತತ್ವವೂ ಇಲ್ಲ, ಸಿದ್ಧಾಂತ ಮೊದಲೇ ಇಲ್ಲ. ಹೆಚ್ಚು ಹಣ ಇರುವವನೇ ಅಭ್ಯರ್ಥಿ. ಜಾತಿ, ಮತ, ಪಂಗಡಗಳ ಆಧಾರದಲ್ಲಿ ಅಭ್ಯರ್ಥಿಯ ಆಯ್ಕೆ. ಸಮಾಜ, ದೇಶ, ಪ್ರಜೆಗಳ ಸುಖದುಃಖ ಇದ್ಯಾವುದರದ್ದೂ ಕಾಳಜಿ ಇಲ್ಲ. ಕೊಟ್ಯಾನುಗಟ್ಟಲೆ ಹಣ ಖರ್ಚು ಮಾಡಿದವನು, ಇನ್ನೈದು ವರ್ಷದಲ್ಲಿ ಬಡ್ಡಿ ಸಮೇತ ಗಳಿಸಬೇಕಾದುದನ್ನೇ ಚಿಂತಿಸಿಯಾನು. ಇನ್ನು ಪ್ರಜೆಗಳ ಸೇವೆ ಎಲ್ಲಿ? ಅದಕ್ಕಾಗೇ ವ್ಯವಸ್ಥೆಯಲ್ಲಿನ ನಂಬಿಕೆ ಕಡಿಮೆಯಾಗುತ್ತಿರುವುದು.

ಇನ್ನು ಮತದಾರರೂ ಅಷ್ಟೇ. ಮತದಾನ ದಿನದಂದು ಹಬ್ಬಕೂಟ. ಉಂಡು ಮಲಗಿ ಮತದಾನಕ್ಕೆ ಹೋಗದೆ ನಂತರ ಪಾರ್ಕಿನ ಹರಟೆ ಕಟ್ಟೆಯಲ್ಲಿ ಕೂತು ಆಕ್ಷೇಪಣೆ ಮಾಡುವುದು. ಅದರಲ್ಲೂ ವಿದ್ಯಾವಂತರೆನಿಸಿಕೊಂಡವರ ಸಂಖ್ಯೆಯೇ ಹೆಚ್ಚು. ಹೀಗಿರುವಾಗ ಭಂಗ ವಿಧಾನ ಸಭೆ ಆಗುವುದು ಆಶ್ಚರ್ಯವೇನಲ್ಲ!

ಈ ಬಾರಿಯ ಫಲಿತಾಂಶ 3ನೇ ಸ್ಥಾನ ಬಂದವನಿಗೆ 1ನೇ ರ್‍ಯಾಂಕ್ ಮೊದಲನೇ ಸ್ಥಾನ ಬಂದವನಿಗೆ 3ನೇ ರ್‍ಯಾಂಕ್ ಕೊಟ್ಟಂತೆ ಆಗಿದೆ. ಹಂಗ್ ಅಸೆಂಬ್ಲಿ, ಹಂಗಿನ ಅಸೆಂಬ್ಲಿ ಆಗಿದೆ. ಹೋಗಲಿ ಬಿಡಿ. ಈ ಬಾರಿ ಚುನಾವಣೆಯ ಕಥೆ ಮುಗಿಯಿತು. ಮುಂದೇನು? ಯಾರೋ ಆಡಳಿತ ನಡೆಸುತ್ತಾರೆ. ಇನ್ನೈದು ವರ್ಷ ಸ್ವಸೇವೆ ಮಾಡಿಕೊಂಡೇ ಕಾಲ ತಳ್ಳುತ್ತಾರೆ. ಆದರೆ ಮತದಾರರಾಗಿ, ಮತದಾನ ಮಾಡಿದವರಾಗಿ ನಮ್ಮದೇನು ಜವಾಬ್ದಾರಿ? ನಾವು ರಾಮಾಯಸ್ವಸ್ತೀ ರಾವಣಾಯಸ್ವಸ್ತಿ ಎಂದು ಕರ್ತವ್ಯ ಮರೆತು, ನಮ್ಮ ಹಣೆ ಬರಹ ಎಂದು ಕೈಕಟ್ಟಿ ಕೂರುವುದೇ? ಖಂಡಿತ ಅಲ್ಲ. "Eternal vigilance is the price" ಎನ್ನುವಂತೆ ಸದಾ ಜಾಗೃತರಾಗಿರಬೇಕು. ಅದಕ್ಕಾಗಿ ಈ ಕೆಳಕಂಡ ಕೆಲವು ಅಂಶಗಳ ಬಗ್ಗೆ ನಾವು ಗಮನಕೊಡಬಹುದೇ?

1. ನಮ್ಮ ಕ್ಷೇತ್ರದಲ್ಲಿ ಆಗಬೇಕಾದ ಪ್ರಗತಿಯ ಬಗ್ಗೆ ಹತ್ತಾರು ಜನ ಕೂತು ಚರ್ಚಿಸಿ ನಮ್ಮ ಪ್ರತಿನಿಧಿಯನ್ನು ಭೇಟಿ ಮಾಡಿ ಕೆಲಸಮಾಡಿ ಕೊಡುವಂತೆ ಆಗ್ರಹಿಸುವುದು.
2. ನಮ್ಮ ರಸ್ತೆಯ ಮತದಾರರೆಲ್ಲಾ ಕೂತು ಚರ್ಚಿಸಿ, ನಮ್ಮ ಪ್ರತಿನಿಧಿ ಚುನಾವಣೆಗೆ ಮುನ್ನ ಕೊಟ್ಟ ಭರವಸೆಗಳ ಬಗ್ಗೆ ನೆನಪಿಸಿ, ಅದನ್ನು ಈಡೇರಿಸುವಂತೆ ಹೇಳುವುದು.
3. ಜನಪ್ರತಿನಿಧಿಯ ಕರ್ತವ್ಯಗಳನ್ನು ಒಂದು ಪೋಸ್ಟ್ ಕಾರ್ಡ್ ಬರೆದು ಜ್ಞಾಪಿಸುವುದು.
4. ತಿಂಗಳಿಗೊಮ್ಮೆಯಾದರೂ ನಮ್ಮ ಬಡಾವಣೆಗೆ ಬಂದು ಕಷ್ಟ ಸುಖಗಳನ್ನು ವಿಚಾರಿಸುವಂತೆ ನಮ್ಮ ಪ್ರತಿನಿಧಿಯನ್ನು ಆಗ್ರಹಿಸುವುದು.
5. ನಮ್ಮ ಪ್ರತಿನಿಧಿ ಭ್ರಷ್ಟಾಚಾರ, ಅಧಿಕಾರ ದುರುಪಯೋಗದಲ್ಲಿ ತೊಡಗಿದ್ದರೆ ಏರುಧ್ವನಿಯಲ್ಲಿ ಪ್ರಶ್ನಿಸಬೇಕು. ಮಾಧ್ಯಮಗಳಲ್ಲಿ ಈ ಬಗ್ಗೆ ದೂರು ಕೊಟ್ಟು ಅವನ ಪ್ರತಿಷ್ಠೆಯನ್ನು ಕುಗ್ಗಿಸಬೇಕು.

ಸ್ವಚ್ಛ, ಸುಂದರ ಸುರಕ್ಷಿತ ಕರ್ನಾಟಕ ನಿರ್ಮಿಸುವುದು ಯಾರಿಗಿಷ್ಟವಾಗುವುದಿಲ್ಲ ಹೇಳಿ. ಅದನ್ನು ಯಾರೋ ಮಾಡುವರೆಂದು ನಾವು ಕೈಕಟ್ಟಿ ಕೂರದೆ ಅದನ್ನು ಆಗಮಾಡಿಸುವ ಜವಾಬ್ದಾರಿಯನ್ನು ಸ್ವಲ್ಪವಾದರೂ ತೆಗೆದುಕೊಳ್ಳೋಣ. ನೀವೇನಂತೀರಿ?

●

---

➢ ಪುಟ 3 ರಿಂದ..... ಸಾವರ್‌ಕರ್...

ಕೇಳುತ್ತಲೇ ಸಾಯುತ್ತಿದ್ದ. ಮೈಕೈ ಮುದುಡಿ ಮಲಗಬೇಕಾದಷ್ಟು ಜಾಗವಿದ್ದ ಕೋಣೆ. ಸೊಳ್ಳೆಯ ಕಾಟಬೇರೆ. ನಿತ್ಯ ಕೈಯಿಂದ ಜಜ್ಜಿ ತೆಂಗಿನ ಮೊಟ್ಟೆಯಿಂದ ನಾರು ತೆಗೆಯಬೇಕಾದ ಕಾಯಕ. ಎಣ್ಣೆ ಗಾಣಕ್ಕೆ ಕಟ್ಟಿ ನಿತ್ಯ ಎರಡು ಸೇರು ಎಣ್ಣೆ ತೆಗೆಯುವ ಘೋರಶಿಕ್ಷೆ. ಇಷ್ಟಾದರೂ ಅವರಲ್ಲಿದ್ದ ಸ್ವಾತಂತ್ರ್ಯದ ಕಿಡಿಯನ್ನು ಯಾರಿಗೂ ಆರಿಸಲಾಗಲಿಲ್ಲ.

1921ರಲ್ಲಿ ಸಾವರ್‌ಕರ್‌ರನ್ನು ರತ್ನಗಿರಿಯ ಜೈಲಿಗೆ ಸ್ಥಳಾಂತರಿಸಲಾಯಿತು. ಹಲವು ವರ್ಷ ಅಲ್ಲಿ ಕಳೆದ ನಂತರ ಅವರನ್ನು ಅಲ್ಲೇ ಗೃಹಬಂಧನದಲ್ಲಿ ಇರಿಸಿದರು. ಅಲ್ಲೇ ಅವರು ಬಗೆ ಬಗೆಯ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡದ್ದು. ಹಿಂದೂ ಸಮಾಜದ ಸರ್ವರೂ ಅಣ್ಣ ತಮ್ಮಂದಿರು, ಇಲ್ಲಿ ಮೇಲು ಕೀಳು ಯಾರಿಲ್ಲ ಎಂದು ಘೋಷಿಸಿ ಎಲ್ಲರೂ ಪ್ರವೇಶಿಸುವಂತಹ 'ಪತಿತಪಾವನ ಮಂದಿರ' ವನ್ನು ನಿರ್ಮಿಸಿದರು.

ಅವರ ರಾಜಕೀಯ ಪ್ರವೇಶವನ್ನು ಸ್ವತಂತ್ರ ಭಾರತದ ಸರಕಾರ ಸಹಿಸಲಿಲ್ಲ. ಅವರ ಮೇಲೆ ನಿರ್ಬಂಧ ಹೇರಿತು. ಆದರೆ ರಾಜಕಾರಣ ಅವರಿಗೆ ಅನಿವಾರ್ಯವಾಗಿರಲಿಲ್ಲ. ಬಾಲ್ಯದಲ್ಲಿ ಸ್ವೀಕರಿಸಿದ್ದು ದೇಶಸೇವೆಯ ವ್ರತವನ್ನು. ಅದಕ್ಕಾಗಿ ಸಮಾಜ ಸುಧಾರಣೆ, ಲಿಪಿಶುದ್ಧಿ, ಭಾಷಾಶುದ್ಧಿ, ಪಂಚಾಂಗ ಸುಧಾರಣೆ ಮುಂತಾದ ಹಲವು ಕಾರ್ಯಗಳಲ್ಲಿ ಅವರನ್ನು ತೊಡಗಿಸಿಕೊಂಡರು.

ಭಾರತ 1947ರಲ್ಲಿ ತುಂಡಾಗಿ ಸ್ವಾತಂತ್ರ್ಯ ಗಳಿಸಿಕೊಂಡಾಗ ಸಾವರಕರರಿಗೆ 64 ವರ್ಷ. ಅಲ್ಲಿಂದ ಅವರ ಮಾನಸಿಕ ವ್ಯಥೆ ಆರಂಭವಾಯಿತು. 1962ರಲ್ಲಿ ಚೀನಾ ಆಕ್ರಮಣ ಅವರನ್ನು ಅರೆ ಜೀವಗೊಳಿಸಿತು. ಸ್ವತಂತ್ರ ಭಾರತದ ದುರವಸ್ಥೆಯನ್ನು ಅವರು ಕಾಣ ಬಯಸಿರಲಿಲ್ಲ. ಅವರಿಗೆ ಬದುಕು ಸಾಕೆನಿಸಿತು.

ಪ್ರಾಯೋಪವೇಶ ವ್ರತ ಸ್ವೀಕರಿಸಿ 1966 ಫೆಬ್ರವರಿ 26 ರ ಬೆಳಿಗ್ಗೆ 11 ಗಂಟೆಗೆ ಅವರು ತಮ್ಮ 83ನೇ ವಯಸ್ಸಿನಲ್ಲಿ ಪ್ರಕೃತಿಯೊಂದಿಗೆ ಸಮರಸರಾದರು.

ಸ್ವತಂತ್ರ ಭಾರತ ಸಾವರ್ಕರ್‌ರ ಆತ್ಮಾಹುತಿಯನ್ನು ಗುರುತಿಸಲೇ ಇಲ್ಲ. ಅವರಿಗೆ ಯಾವ ಬಿರುದು ಬಾವಲಿ ಭೂಷಣಗಳನ್ನು ನೀಡಲಿಲ್ಲ. ಆದರೆ ಭಾರತದ ಯುವಜನತೆಯ ಹೃದಯದಲ್ಲಿ ಅವರು ಸದಾ ಚಿರಸ್ಥಾಯಿ. ಅದಕ್ಕಿಂತ ದೊಡ್ಡ ಪುರಸ್ಕಾರ ಅವರಿಗ್ಯಾಕೆ ಬೇಕು?

●

➢ ಪುಟ 6 ರಿಂದ..... ಬದುಕು...

ಇವರು. ಒಂದು ಕೈಯಲ್ಲಿ ಮಣ್ಣನ್ನು ಮೊತ್ತೊಂದು ಕೈಯಲ್ಲಿ ನಾಣ್ಯವನ್ನು ಹಿಡಿದು, ' ಇದೂ ಅದೇ, ಅದೂ ಇದೇ' ಎಂದು ಗಂಗೆಗೆ ಎಸೆದು ಕೈ ತೊಳೆದುಕೊಂಡರು, ಮನ ತೊಳೆದುಕೊಂಡರು. ಹರೆಯದ ಪತ್ನಿಯನ್ನು ಮಗ್ಗುಲಲ್ಲಿ ಮಲಗಿಸಿಕೊಂಡು ಮನಸ್ಸಿಗೆ ಹೇಳುತ್ತಾರೆ 'ಇಡೀ ಜಗತ್ತು ಆಶಿಸುವ ಬಯಸುವ ವಸ್ತು ಇದು. ಬೇಕಾದರೆ ಭೋಗಿಸು' ಅವರ ಮನಸ್ಸು ಶರ ವೇಗದಲ್ಲಿ ಹಿಮ್ಮೆಟ್ಟಿ ಸಮಾಧಿ ಸ್ಥಿತಿಗೇರಿ ಬಿಡುತ್ತದೆ. 'ಅಬ್ಬ' ಕಾಮ ಕಾಂಚನ ತ್ಯಾಗವೆಂದರೆ ಇದು! ಅವರ ಸುಪ್ತ ಮನಸ್ಸು ಈ ಆದರ್ಶವನ್ನು ಬಲವಾಗಿ ಹಿಡಿದಿತ್ತು. ಆದುದರಿಂದ ವ್ಯಕ್ತ ಮನಸ್ಸು ಕೂಡ ಅದನ್ನೇ ಅನುಸರಿಸಿತ್ತು. ಶ್ರೀಮಾತೆಯವರ ಸುಪ್ತ ಮನಸ್ಸಿನಲ್ಲಿ ಏನಿತ್ತು? ಪ್ರೀತಿ– ವಾತ್ಸಲ್ಯ. ವಿವೇಕಾನಂದರಲ್ಲಿ? ಶಕ್ತಿ ಸಂದೇಶ. ದಿವ್ಯತ್ರಯರ ಜೀವನ ಸಂದೇಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರೆಲ್ಲ ಮಿತಿಯಾಚೆಗಿನ ಮಿಂಚು ಕಂಡವರು ಎಂಬುದು ಸ್ಪಷ್ಟವಾಗುತ್ತದೆ.

ಬದುಕೆಂಬುದು ಅವಕಾಶ. ಆಕಾಶದೆತ್ತರದ ಬಾನಗಲದ ಅವಕಾಶ. ಅದರ ವಿಸ್ತಾರದೆದುರು ನಾವೆಲ್ಲ ವಾಮನ ಮೂರ್ತಿಗಳು. ಆದರೆ ಆತ್ಮ ವಿಶ್ವಾಸ, ಪರಿಶ್ರಮ, ಶ್ರದ್ಧೆಗಳೆಂಬ ಮೂರು ಹೆಜ್ಜೆಗಳಲ್ಲಿ ಮಿತಿಯನ್ನು ಮೆಟ್ಟಿ ನಾವೂ ವಾಮನ ಅವತಾರರಾಗಬಹುದು! ಎಂತಹ ಆತ್ಮವಿಶ್ವಾಸವಿರಬೇಕು ಎಂದರೆ ಮಹಾಶಿವನಲ್ಲಿರುವಷ್ಟು ಇರಬೇಕು. ಯಾರಾದರೂ ವಿಷ ಕುಡಿಯುತ್ತಾರೆಯೇ? ಅದರಲ್ಲಿಯೂ ಹಾಲಾಹಲ! ಜಗತ್ತು ತಲ್ಲಣಿಸಿದಾಗ ಮಹಾಶಿವ ಅದನ್ನೆತ್ತಿ ಕುಡಿದೇಬಿಟ್ಟ. ಅದನ್ನೂ ಅರಗಿಸಿಕೊಳ್ಳುವ ತಾಕತ್ತು ಇತ್ತು ಅವನಿಗೆ. ವಿಷದ ಶಕ್ತಿ ಶಿವನ ಮುಂದೆ ನಡೆಯಲಿಲ್ಲ. ಹೊಟ್ಟೆಗೆ ಇಳಿದಿದ್ದರೆ ಜೀರ್ಣಿಸಿಕೊಂಡು ಬಿಡುತ್ತಿದ್ದನೇನೋ –ಅದು ಕಂಠದಲ್ಲೇ ನಿಂತು ಅವನನ್ನು ವಿಷಕಂಠನನ್ನಾಗಿಸಿತು. ಪರಿಶ್ರಮ ಎಷ್ಟಿರಬೇಕು ಎಂದರೆ ಆಂಜನೇಯನಷ್ಟು. ಲಂಕೆಗೆ ತಲುಪಲು ಸಾಗರೋಲ್ಲಂಘನಕ್ಕೂ ಸಿದ್ಧ. ರಾಮನಿಗೆ ಬೇಕು ಎಂದಾದರೆ ಸಂಜೀವಿನಿಯನ್ನೇ ಹೊತ್ತು ತರಲು ಸಿದ್ಧ. ಶ್ರದ್ಧೆ ನಚಿಕೇತನಿಗೆ ಇದ್ದಷ್ಟು ಇರಬೇಕು. 'ಯಮ' ಎಂದರೆ ಎಂತಹ ಯಜಮಾನ'ರೆಲ್ಲ ನಡುಗಿ ಬಿಡುತ್ತಾರೆ. ಅಂತಹುದರಲ್ಲಿ ಅವನನ್ನೇ ಭೇಟಿಯಾಗಲು ಹೋದ. ಅವನಿಲ್ಲ ಎಂದರೆ ಮೂರು ದಿನ ಕಾದು ನಿಂತ. ಪ್ರಶ್ನೆಗಳಿಂದ ಅವನನ್ನೇ ಬೆಚ್ಚಿ ಬೀಳಿಸಿದ. ನಾವೂ ಇಂತೆಯೇ ಮಿತಿಯಾಚೆಗಿನ ಮಿಂಚನ್ನು ದರ್ಶಿಸೋಣ, ಬದುಕಿನ ಸವಾಲುಗಳನ್ನು ಸ್ವೀಕರಿಸೋಣ.

> **“ ನಮ್ಮನ್ನು ಆಳುವವರು ಬುದ್ಧಿವಂತರಾಗಿರಬೇಕು. ಆದರೆ ಪ್ರಜಾಪ್ರಭುತ್ವದಲ್ಲಿ ಬುದ್ಧಿವಂತರಿಗೆ ಜಾಗವಿಲ್ಲ! ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಯಾರು ಬೇಕಾದರೂ ಆರಿಸಿಬಂದು ರಾಜ್ಯವಾಳಬಹುದು. ಅಲ್ಲದೆ ಆಳುವವರು ಮತ್ತು ಆಳಿಸಿಕೊಳ್ಳುವವರೀರ್ವರೂ ಬುದ್ಧಿವಂತರಾಗಿರುವುದಿಲ್ಲ ವಾದ್ದರಿಂದ ಆಡಳಿತ ವ್ಯವಸ್ಥೆಯನ್ನು 'ಢೋಂಗಿ' ಆಗಿಸಬಲ್ಲದು. ಆದ್ದರಿಂದ ಆಳುವವನಿಗೆ ಸೂಕ್ತ ಶಿಕ್ಷಣ ದೊರೆತು, ತರಬೇತಿ ಪಡೆದು, ಬುದ್ಧಿವಂತನಾದರೆ ,ಅವನ ರಾಜ್ಯಭಾರವು ಸುಗಮ, ಸುಭದ್ರ, ಸಂತೋಷ ಹಾಗೂ ಸುಖಗಳಿಂದ ಮೆರೆಯುತ್ತದೆ. –ಸಾಕ್ರಟೀಸ್**

➢ ಪುಟ 9 ರಿಂದ..... ಪರಿಸರ...

3. ಪ್ರತಿನಿಮಿಷಕ್ಕೊಂದು ಕಸ ಸಾಗಿಸುವ ಲಾರಿಯಷ್ಟು ಪ್ಲಾಸ್ಟಿಕ್‌ನಂತೆ ಪ್ರತಿವರ್ಷ 30 ಲಕ್ಷ ಟನ್ ಗಿಂತಲೂ ಅಧಿಕ ಪ್ಲಾಸ್ಟಿಕ್ ಸಮುದ್ರ ಸೇರುತ್ತಿವೆ.
4. ಕಳೆದ 10 ವರ್ಷಗಳಲ್ಲಿ ನಾವು ಉಪಯೋಗಿಸಿದ ಪ್ಲಾಸ್ಟಿಕ್ ಕಳೆದ 100 ವರ್ಷಗಳಲ್ಲಿ ಉಪಯೋಗಿಸಿದ್ದಕ್ಕಿಂತಲೂ ಹೆಚ್ಚು.
5. ಪ್ರತಿ ನಿಮಿಷ ನಾವುಗಳು 10 ಲಕ್ಷ ಪ್ಲಾಸ್ಟಿಕ್ ಬಾಟಲುಗಳನ್ನು ಖರೀದಿಸುತ್ತೇವೆ.
6. ನಾವು ಉತ್ಪಾದಿಸುತ್ತಿರುವ ಕಸದ ಪ್ರಮಾಣದಲ್ಲಿ ಪ್ಲಾಸ್ಟಿಕ್‌ನ ಪಾಲು ಶೇಕಡಾ 10.

### ಪ್ಲಾಸ್ಟಿಕ್ ಮಲಿನತೆಯ ಪರಿಣಾಮ

ಪ್ಲಾಸ್ಟಿಕ್‌ನಲ್ಲಿ ಅನೇಕ ಬಗೆಯ ವಿಷಕಾರೀ ವಸ್ತುಗಳಿವೆ. ಇದರಿಂದ ಜೀವ ವೈವಿಧ್ಯದ ಮೇಲೆ ಆಗುವ ಹಾನಿ ಅಪಾರ.

1. ಭೂಮಿಯಲ್ಲಿ ಗೊಬ್ಬರವಾಗಿ ಕರವಾಗದೆ, ಭೂಮಿಯ ಸತ್ವವನ್ನು ನಾಶಪಡಿಸುತ್ತಿದೆ.
2. ಸಸ್ಯ ಪೋಷಕವಾದ ಕ್ರಿಮಿ, ಕೀಟಾದಿಗಳು ಬ್ಯಾಕ್ಟೀರಿಯಾಗೆ ಇದು ಹಾನಿಕಾರಕ.
3. ಇದನ್ನು ಸುಟ್ಟಾಗ ವಾತಾವರಣವು ಮಲಿನಗೊಳ್ಳುತ್ತದೆ. ವಾತಾವರಣದಲ್ಲಿ ಇಂಗಾಲದ ಪ್ರಮಾಣ ಅಧಿಕವಾಗಿ ಭೂಮಿಯ ಶಾಕ ಏರುವುದು.
4. ಪ್ರಾಣಿಗಳಿಗೆ ಮೃತ್ಯುಕಾರಕ.
5. ಮನುಷ್ಯರ ವಿವಿಧ ಬಗೆಯ ಖಾಯಿಲೆಗಳ ಮೂಲ.

ಹೀಗೆ ನೀರು, ಗಾಳಿ, ಭೂಮಿ, ಜೀವ ಸಂಕುಲಕ್ಕೆ ಪ್ಲಾಸ್ಟಿಕ್ ಮಾರಕ ವಸ್ತು.

### ಪ್ಲಾಸ್ಟಿಕ್ ಮಲಿನತೆ ತಡೆಯಲು ನಾವೇನು ಮಾಡಬಹುದು?

1. ಅಂಗಡಿಗೆ ಹೋಗುವಾಗ ಬಟ್ಟೆಯ ಕೈ ಚೀಲ ತೆಗೆದುಕೊಂಡು ಹೋಗಿರಿ. ಪ್ಲಾಸ್ಟಿಕ್ ಚೀಲ ಬೇಡವೆನ್ನಿರಿ.
2. ಎಳನೀರು, ಜ್ಯೂಸು ಕುಡಿಯುವಾಗ ಪ್ಲಾಸ್ಟಿಕ್ ಕೊಳವೆ ಬಳಸದಿರಿ.
3. ಬಾಟಲ್‌ನಲ್ಲಿರುವ ಪದಾರ್ಥಗಳನ್ನು ಕೊಳ್ಳುವ ಬದಲು ರಟ್ಟಿನ ಪೆಟ್ಟಿಗೆಯಲ್ಲಿರುವುದನ್ನು ಕೊಳ್ಳಿರಿ (ಉದಾ ಸೋಪಿನ ಪುಡಿ)
4. ಮನೆಗಳಲ್ಲಿ ಆಹಾರ ಸಾಮಗ್ರಿಗಳನ್ನು ಪ್ಲಾಸ್ಟಿಕ್ ಬಾಟಲ್ ಬದಲಿ ಸ್ಟೀಲ್ ಡಬ್ಬಾ ಅಥವಾ ಗಾಜಿನ ಬಾಟಲ್‌ನಲ್ಲಿ ಸಂಗ್ರಹಿಸಿರಿ.
5. ಶೈತ್ಯೀಕರಿಸಿದ ಆಹಾರ ಪದಾರ್ಥಗಳು ಪ್ಲಾಸ್ಟಿಕ್ ಪ್ಯಾಕಿಂಗ್‌ನಲ್ಲಿ ಬರುತ್ತವೆ. ಇದು ಆರೋಗ್ಯಕ್ಕೆ ಹಾನಿಕರ. ಇದಕ್ಕೆ 'ಗುಡ್ ಬೈ ಹೇಳಿರಿ.
6. ಪ್ಲಾಸ್ಟಿಕ್ ಚಮಚ, ಲೋಟ, ಚಾಕು ಮುಂತಾದವನ್ನು ಉಪಯೋಗಿಸಬೇಡಿ. ಸ್ಟೀಲ್‌ನಿಂದಾದ ವಸ್ತು ಉಪಯೋಗಿಸಿರಿ.
7. ಪ್ಲಾಸ್ಟಿಕ್ ಬಾಟಲ್‌ನಲ್ಲಿ ಬರುವ ಜ್ಯೂಸನ್ನು ಉಪಯೋಗಿಸಬೇಡಿರಿ. (ಕೋಕಾಕೋಲ, ಫಾಂಟಾ ಇತ್ಯಾದಿ)
8. ಬಳಸಿ ಬಿಸಾಡುವ ಡಾಟ್‌ಪೆನ್, ಜೆಲ್‌ಪೆನ್ ಬದಲಿಗೆ ಇಂಕ್ ಪೆನ್ನನ್ನು ಬಳಸಲು ಪ್ರೋತ್ಸಾಹಿಸಿ.

●

**ಮಾನವನಿಗೆ ಅಹಂಕಾರ, ಮಮಕಾರ ಎನ್ನುವ ಇಬ್ಬರು ಶತ್ರುಗಳಿದ್ದಾರೆ. 'ಅಹಂ' ಮೀರಿ ನಿಲ್ಲುವವನೇ ಜ್ಞಾನಿ.**

# ಜನ – ಮನಕೆ ತಂಪುಣಿಸುವ ಅರಳಿಮರ



ಅಶ್ವತ್ಥವು ಪುರಾಣಪ್ರಸಿದ್ಧವಾಗಿದ್ದು, ತ್ರಿಮೂರ್ತಿಗಳು ನೆಲೆಸಿರುವರೆಂಬ ಧಾರ್ಮಿಕ ನಂಬಿಕೆಯಿಂದ ಪೂಜಿಸುವ ಸಂಪ್ರದಾಯವಿದೆ. ಅಶ್ವತ್ಥವು ಮೊಹೆಂಜೋದಾರೋ ಕಾಲದಿಂದಲೂ ಭಾರತೀಯ ಸಂಸ್ಕೃತಿಯೊಂದಿಗೇ ಹಾಸುಹೊಕ್ಕಾಗಿದೆ. ಇದನ್ನು ಪುಣ್ಯಸ್ಥಳ, ದೇವಾಲಯಗಳ ಆವರಣ, ನಾಲ್ಕು ರಸ್ತೆಗಳ ನಡುವೆ, ಸ್ಮಶಾನದಲ್ಲಿ ಬೆಳೆಸಲಾಗುತ್ತಿತ್ತೆಂದು ಮನು– ಯಾಜ್ಞವಲ್ಕ್ಯರಿಂದ ತಿಳಿದು ಬರುತ್ತದೆ.

ಹಿಂದಿನ ಕಾಲದಲ್ಲಿ ರಾಜರು ತಮ್ಮ ಗಡಿಗಳ ಗುರುತಿಗಾಗಿ ರಸ್ತೆಯಂಚಿನ ಸಾಲು ಮರವಾಗಿ ನೆಡುತ್ತಿದ್ದರು. ಮಹಾಭಾರತ ಕಾಲದಲ್ಲಿ ವಿದುರನಿಂದ ನೆಡಲ್ಪಟ್ಟಿತೆಂದು ಹೇಳಲಾಗುವ ಅಶ್ವತ್ಥ ವೃಕ್ಷವನ್ನು ಇಂದಿಗೂ ವಿದುರಾಶ್ವತ್ಥದಲ್ಲಿ ಕಾಣಬಹುದು.

ಹೋಮ ಮಾಡಲು ಅರಳಿಕಟ್ಟಿಗೆಯು (ಸಮಿತ್ತು) ಅತ್ಯವಶ್ಯವೆಂಬುದು ವೇದೋಕ್ತವಾಗಿದೆ. ಬೋಧಿವೃಕ್ಷದಡಿಯಲ್ಲೇ ಗೌತಮಬುದ್ಧನಿಗೆ ಜ್ಞಾನೋದಯವಾದದ್ದು. ಶ್ರೀ ಮದ್ಭಗವದ್ಗೀತಾದ ವಿಭೂತಿಯೋಗದಲ್ಲಿ ನಾನು (ಶ್ರೀ ಕೃಷ್ಣ) ಸರ್ವವೃಕ್ಷಗಳಲ್ಲಿ ಅಶ್ವತ್ಥನಾಗಿದ್ದೇನೆ (ಅಶ್ವತ್ಥನಾರಾಯಣ) ಎಂದು ತಿಳಿಸಿದ್ದಾನೆ.

ಅಶ್ವತ್ಥ (ಪಿಪ್ಪಲ, ಚಲಪತ್ರ) ವು ಒಗರು ಮತ್ತು ಸಿಹಿರಸಗಳಿಂದ ಕೂಡಿದ್ದು, ಕಫಹರ, ಪಿತ್ತನಾಶಕ, ರಕ್ತಶೋಧಕ, ಬಲ್ಯ ಪೌಷ್ಠಿಕ, ವೀರ್ಯವರ್ಧಕ, ಕಾಂತಿವರ್ಧಕ, ದಾಹಶಮನ, ಯೋನಿದೋಷ ನಿವಾರಕ ಇತ್ಯಾದಿ ಗುಣಗಳನ್ನು ಹೊಂದಿದೆ. ಆದ್ದರಿಂದಲೇ ಹಿಂದಿಯಲ್ಲಿ ಪೀಪಲ್, ಪೀಪರ್, ಭೋರೆ ಹೆಸರಿನ ಈ ವೃಕ್ಷಕ್ಕೆ ಇಷ್ಟೊಂದು ಮಹತ್ವ ಮೊದಲಿನಿಂದಲೂ ಬಂದಿದೆ. ಈ ಬಹುವಾರ್ಷಿಕ ವೃಕ್ಷದ ಬೇರು, ಕಾಂಡ, ತೊಗಟೆ ಎಲೆ, ಹಣ್ಣು, ಕಾಯಿ, ಹಾಲು ಪ್ರತಿಯೊಂದೂ ಔಷಧದ ಉಪಯೋಗಕ್ಕೆ ಬರುತ್ತದೆ. ಚೂರ್ಣ ಕಷಾಯಗಳ ರೂಪದಲ್ಲಿ ಪ್ರಮಾಣಬದ್ಧವಾಗಿ ವೈದ್ಯರ ಸಲಹೆ ಮೇರೆಗೆ ಸೇವಿಸಬಹುದಾಗಿದೆ.

## ಉಪಯೋಗಗಳು:

- ಅರಳಿಮರದ ಒಣಗಿದ ತೊಗಟೆಯನ್ನು ಭಸ್ಮ ಮಾಡಿ, ಒಂದು ಲೋಟ ನೀರಿನಲ್ಲಿ ಒಂದು ಚಮಚದಷ್ಟು ಭಸ್ಮವನ್ನು ಕದಡಿ ಬಟ್ಟೆಯಿಂದ ಶೋಧಿಸಿ ಆ ನೀರನ್ನು ಕುಡಿಯುವುದರಿಂದ ವಾಂತಿ ಶಮನವಾಗುವುದು, ವಾಕರಿಕೆ ಮತ್ತು ಬಿಕ್ಕಳಿಗೆ ನಿಲ್ಲುವುದು. ಅಶ್ವತ್ಥವನ್ನು ಕಷಾಯ ರೂಪದಲ್ಲಿ ನಿತ್ಯ ಸೇವಿಸುವುದರಿಂದ ಬಂಜೆತನ ದೂರವಾಗುವುದಂತೆ.
- ಪಂಚಕ್ಷೀರ ವೃಕ್ಷಗಳ ಕಷಾಯವನ್ನು ನಿತ್ಯ ಸೇವಿಸಿದಾಗ ಹಿಮೋಫಿಲಿಯಾ (ಕುಸುಮ) ರೋಗಕ್ಕೂ ಪ್ರಯೋಜನಕಾರಿಯೆಂದು ಸಂಶೋಧನೆಗಳಿಂದ ತಿಳಿದುಬಂದಿದೆ.
- ಅರಳಿಯ ಚಿಗುರೆಲೆಗಳನ್ನು ದಿನಕ್ಕೆ ಎರಡು ಸಾರಿ ಅಗಿದು ತಿನ್ನುವುದರಿಂದ ಬಹುಮೂತ್ರ, ಲಘುಮೂತ್ರ, ಉರಿಮೂತ್ರ, ಕಟ್ಟುಮೂತ್ರ ಇತ್ಯಾದಿ ಮೂತ್ರದೋಷಗಳು ನಿವಾರಣೆಯಾಗುವವು.
- ಅರಳಿ ತೊಗಟೆಯ ಒಣ ಚೂರ್ಣವನ್ನು ಕೊಬ್ಬರಿ ಎಣ್ಣೆಯಲ್ಲಿ ಕಲೆಸಿ ಲೇಪಿಸುವುದರಿಂದ ಸುಟ್ಟ ಗಾಯಗಳು ಗುಣವಾಗುತ್ತವೆ. ಗಾಯದಲ್ಲಿ ನೀರಾಡುತ್ತಿದ್ದರೆ ಗಾಯದ ಮೇಲೆ ಚೂರ್ಣವನ್ನು ಉದುರಿಸಬಹುದು.
- ಅಶ್ವತ್ಥ ಎಲೆಗಳನ್ನು ಕುಟ್ಟಿ ರಸದಲ್ಲಿ ಅರಳಿಮರದ ಬುಡದಿಂದ ಕತ್ತರಿಸಿ ತೆಗೆದ ಚಕ್ಕೆಯನ್ನು ತೇಯ್ದು ಸಂಗ್ರಹಿಸಿದ ಗಂಧವನ್ನು ನಾಲ್ಕಾರು ಬಾರಿ ನಾಲಿಗೆಯ ಮೇಲೆ ಹಚ್ಚಿದರೆ ನಾಲಿಗೆ ಸೀಳುವುದು, ನಾಲಿಗೆ ಹುಣ್ಣು, ನಾಲಿಗೆ ರುಚಿ ಕಳೆದುಕೊಳ್ಳುವಿಕೆ ಮುಂತಾದ ನಾಲಿಗೆ ದೋಷಗಳು ನಿವಾರಣೆಯಾಗುವವು.
- ಅರಳಿ ತೊಗಟೆಯ ಚೂರ್ಣದೊಂದಿಗೆ ಸ್ವಲ್ಪ ಉಪ್ಪು ಸೇರಿಸಿ ಹಲ್ಲುಜ್ಜುತ್ತಿದ್ದರೆ ಹಲ್ಲುನೋವು ನಿವಾರಣೆಯಾಗುವುದು.
- ಚಿಗುರೆಲೆಯ ನಿರಂತರ ಸೇವನೆಯಿಂದ ರಕ್ತಶುದ್ಧಿಯಾಗುವುದು.
- ಚರ್ಮರೋಗಗಳಾದ ಚಿಬ್ಬು, ಕಲೆ ಮಚ್ಚೆ ಇತ್ಯಾದಿ ರೋಗಗಳು ಗುಣವಾಗುವವು. ಒಂದು ಬಟ್ಟಲು ನೀರಿಗೆ ಅರಳಿ ಚಕ್ಕೆ (ತೊಗಟೆ ಬಿಟ್ಟು ಉಳಿದ ಭಾಗ) ಕುಟ್ಟಿ ಪುಡಿಮಾಡಿಟ್ಟುಕೊಂಡು ಒಂದು ಚಮಚದಷ್ಟು ಪುಡಿಯನ್ನು ಹಾಕಿ ಕಷಾಯದ ಪ್ರಮಾಣವು ನೀರಿನ ಚತುರಾಂಶದಷ್ಟಾದಾಗ ಇಳಿಸಬೇಕು. ಹೀಗೆ ತಯಾರಿಸಿದ ಕಷಾಯವನ್ನು ದಿನಕ್ಕೆರಡು ಸಾರಿ ಸೇವಿಸುತ್ತಿದ್ದರೆ ಚರ್ಮರೋಗ ನಿವಾರಣೆಯಾಗುವುದು. ಇದೇ ವೇಳೆಗೆ ಅಕ್ಕಿತೊಳೆದ ನೀರಿನಲ್ಲಿ ಅರಳಿ ಚಕ್ಕೆಯನ್ನ ತೇಯ್ದು ದೋಷವಿದ್ದ ಚರ್ಮಕ್ಕೆ ಲೇಪಿಸುತ್ತಿರಬೇಕು.
- ಅಲ್ಲದೆ ತಜ್ಞ ಆಯುರ್ವೇದ ವೈದ್ಯರು ಉಬ್ಬಸರೋಗ, ಮೂಲವ್ಯಾಧಿ, ಹೊಟ್ಟೆನೋವು, ಯೋನಿದೋಷ, ನರದೌರ್ಬಲ್ಯ, ಅಶಕ್ತತೆ, ಬಿಳುಪು, ಮೂತ್ರದೊಂದಿಗೆ ವೀರ್ಯಸ್ಖಲನ ನಿವಾರಣೆಗೆ, ಋತುಸ್ರಾವಕ್ರಮ ಸರಿಪಡಿಸಲಿಕ್ಕೆ ಮುಂತಾದವುಗಳಿಗೆ ಔಷಧವಾಗಿ ಬಳಸುತ್ತಾರೆ.

ಹೀಗೆ ನಾನಾ ವಿಧದ ಉಪಯೋಗಕ್ಕೆ ಬರುವ ಅರಳೆ ಮರ ನಿಸರ್ಗದತ್ತವಾಗಿಯೇ ಬೆಳೆಯುವ ಗಿಡವಾಗಿದ್ದು ಇದನ್ನು ಕಡಿಯುವ ಪಾಪ ಮಾಡುವುದು ಬೇಡ. ನೆಟ್ಟರೆ ಪರಿಸರ ರಕ್ಷಿಸಿದ ಪುಣ್ಯವಂತೂ ಖಂಡಿತ ಬರುತ್ತದೆ. ಇತ್ತೀಚೆಗೆ ಅನೇಕ ಗಿಡಮೂಲಿಕೆಗಳ ಔಷಧಗಳು ಗುಳಿಗೆ, ದ್ರವೌಷಧ ರೂಪಗಳಲ್ಲೂ ಬರುತ್ತಿವೆ. ಎಂಬುದು ನೆನಪಿನಲ್ಲಿರಲಿ. ಔಷಧ ವೃಕ್ಷಗಳ ರಕ್ಷಣೆಗಾಗಿ ಅಶ್ವತ್ಥ ಕಟ್ಟೆಯಂತಹ ಕಟ್ಟೆಗಳಿವೆ.

(ಸಂಗ್ರಹ)

MAG(3)NAP/230/2017-2018 Registered No. RNI 45459/85
Posted at Bangalore PSO Bangalore -560 026
Date of Publishing : 17-05-2018
Date of Posting 30h or 31st of every month




"ಭಾರತವನ್ನು ತಿಳಿ, ಭಾರತವೇ ಆಗಿ, ಭಾರತವನ್ನು ವಿಶ್ವಗುರುವನ್ನಾಗಿಸು" ಎಂಬ ಧ್ಯೇಯದೊಂದಿಗೆ ತಮ್ಮ 68 ವರ್ಷದ ಹರಯದಲ್ಲೂ ಪಾದಯಾತ್ರೆಯನ್ನು ಐದು ವರ್ಷ ಪೂರ್ಣಗೊಳಿಸಿದ್ದಾರೆ. ಈ ಪಾದಯಾತ್ರೆಯ ಮೂಲ ಉದ್ದೇಶ ಗ್ರಾಮೀಣ ಭಾರತದ ಪುನರುತ್ಥಾನದ ಮೂಲಕ ಕೃಷಿ ಸಂರಕ್ಷಣೆ, ಗೋ–ಪಾಲನೆ, ಪರಿಸರ, ಗ್ರಾಮದ ಜೀವ ವೈವಿಧ್ಯ ರಕ್ಷಣೆ, ಪಾರಂಪರಿಕ ಆರೋಗ್ಯ ರಕ್ಷಣಾ ಪದ್ಧತಿ, ಜಲಸಂಪನ್ಮೂಲ ಉಳಿಸುವಿಕೆ, ಕಲೆ ಕ್ರೀಡಾ ಸಂಸ್ಕೃತಿಯ ರಕ್ಷಣೆ, ಪರಂಪರಾಗತ ಗುಡಿ ಕೈಗಾರಿಕೆ ಅಭಿವೃದ್ಧಿ ಮೊದಲಾದ ವಿಷಯಗಳ ಸಂದೇಶವನ್ನು ಸಾರುವುದಾಗಿತ್ತು. ಪ್ರತಿಹಳ್ಳಿಯಲ್ಲೂ ಅಲ್ಲಿನ ಪ್ರಮುಖರನ್ನು ಭೇಟಿಯಾಗಿ ಅಲ್ಲಿನ ಸಮಸ್ಯೆಯನ್ನು ತಿಳಿದು ಸಂಬಂಧಪಟ್ಟವರಿಗೆ ಪತ್ರ ಬರೆದು ಸಮಸ್ಯೆಗೆ ಪರಿಹಾರ ತಂದುಕೊಟ್ಟಿದ್ದಾರೆ. ದಿನಕ್ಕೆ 12 ಕಿ.ಮಿ ನಡೆಯುತ್ತಿದ್ದ ಇವರು ಹಳ್ಳಿಯಲ್ಲಿನ ಯುವಜನತೆಯಲ್ಲಿ ದೇಶಪ್ರೇಮದ ಕಂಪನ್ನು ಹಾಗೂ ರಾಷ್ಟ್ರೀಯ ಚಿಂತನೆಯನ್ನು ಬಿತ್ತಿದ್ದಾರೆ.

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka State Secondary Teachers' Association (R.)
Published By:
General Secretary,
Karnataka State Secondary Teachers' Association (R.)
Owned By :
Karnataka State Secondary Teachers' Association (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka State Secondary Teachers' Association (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka State Secondary Teachers' Association(R.), Bengaluru -20

srushtidesigns@gmail.com